# ಕೇರಳ ಪಾಠಾವಳಿ
# KERALA READER

## ಕನ್ನಡ - I
## KANNADA - I

## ಮುಂದುವರಿದ ಪಠ್ಯ
## ADVANCED TEXT

ತರಗತಿ
STANDARD

X

ಭಾಗ - 2
PART - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - X (Advanced Text) - Part 2

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮ ಮಾತ್ರವಲ್ಲ, ಅದು ನಮ್ಮ ದೃಷ್ಟಿಯೂ ದೃಷ್ಟಿಕೋನವೂ ಆಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾ ಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಹಾಳೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಪರಸ್ಪರ ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಒಳಗೊಂಡಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA - X AT - Part 2

**Advisor**

| | |
|---|---|
| Shivashankara P. | Associate Professor, GPM College, Manjeshwar |

**Chairman**

| | |
|---|---|
| Dr. Shrikrishna Bhat | Retd. Professor, Government College, Kasaragod |

**Experts**

| | |
|---|---|
| Dr. Radhakrishna N. Bellur | Professor, Government College, Kasaragod |
| Dr. Shridhara N | Professor, Government College, Kasaragod |
| Ramanna D | Retd. Headmaster, GVHSS Delampady |

**Participants**

| | |
|---|---|
| Rajarama Rao T. | Retd. Headmaster, SVVHSS Meeyapadavu |
| Veena K. | Retd. Headmistress, GHSS Bandadka |
| Harisha G | HSST, SVVHSS Meeyapadavu |
| Ravikumar | HSST, GHSS Kumbla |
| Sarvamangala P. | HST, NHSS Peradala |
| Dr. Sathyanarayana Punchithaya | HST, SNHS Perla |
| Geethasavithri | HST, GVHSS Mulleria |
| Parameshwari | HST, SAT Manjeshawara |
| Shrilatha K. | HST, SGKHS Kudlu |
| Prashanthkumar | HST SSHS Sheni |

**Artists**

| | |
|---|---|
| Satheesh K. | Special Teacher, BRC Kumbla |
| Jayaprakash Shetty | Drawing Teacher, SATHSS Manjeshwar |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


**ಘಟಕ ೪ : ದಾರಿದೀಪ** 7 - 35

- ಶಿವಶರಣರ ವಚನಗಳು — ವಚನಸಾಹಿತ್ಯ — ಬಸವಣ್ಣ, ಅಕ್ಕಮಹಾದೇವಿ
- ಪಡಿ — ಕಾದಂಬರಿ — ಮಾಸ್ತಿ ವೆಂಕಟೇಶ ಅಯ್ಯಂಗಾರ್
- ಪಿಡಿಯೆಂ ಪುರಿಗಣೆಯಂ — ಚಂಪೂಕಾವ್ಯ — ಪಂಪ

**ಘಟಕ ೫ : ವ್ಯಕ್ತಿ - ವೃತ್ತಿ** 36 - 54

- ಡೊಂಬರ ಚೆನ್ನೆ — ಕಥನ ಕವನ — ಪಂಜೆ ಮಂಗೇಶರಾಯರು
- ಮೀನು ಮಾರುವವನು — ಕತೆ — ಬೊಳುವಾರು ಮೊಹಮ್ಮದ್ ಕುಞ್ಞಿ
- ಲಮೇರಿಯಾ — ಹಾಸ್ಯಲೇಖನ — ನಾ. ಕಸ್ತೂರಿ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# ೩. ದಾರಿದೀಪ



ಮಾನವನ ಅಸ್ತಿತ್ವಕ್ಕೆ ಸಾಮಾಜಿಕ ಸಂಬಂಧಗಳು ಅಗತ್ಯವಾಗಿವೆ. ಹಾಗೆಯೇ ಎಲ್ಲರ ಮೂಲಭೂತ ಅವಶ್ಯಕತೆಗಳು, ಮನಸ್ಸಿನ ಭಾವನೆಗಳು ಸಮಾನವಾಗಿರುತ್ತವೆ. ಬಗೆ ಬಗೆಯ ಹೂವುಗಳಿಂದ ಕೂಡಿದ ಹಾರವು ನೋಡಲು ಹೇಗೆ ಸುಂದರವಾಗಿರುತ್ತದೆಯೋ ಅದರಂತೆ ವಿವಿಧ ಜಾತಿ, ಮತ, ಧರ್ಮಗಳಿಗೆ ಸೇರಿದ ಜನರೆಲ್ಲ ಐಕ್ಯಭಾವವನ್ನು ಮನಸ್ಸಿನಲ್ಲಿ ಮೂಡಿಸಿಕೊಂಡರೆ ಸುಂದರವಾದ ಸಮಾಜ ನಿರ್ಮಾಣವಾಗಬಹುದು.

'ದಾರಿದೀಪ' ಎಂಬ ಈ ಘಟಕದಲ್ಲಿ ಜೀವನದಲ್ಲಿ ಶ್ರೇಷ್ಠವಾದ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು, ವೃದ್ಧರನ್ನು ಗೌರವಿಸಬೇಕು, ಶಾಂತಿಯಿಂದೊಡಗೂಡಿದ ಸಹಬಾಳ್ವೆಯನ್ನು ನಡೆಸಬೇಕು ಎನ್ನುವ ಆಶಯಗಳನ್ನು ವಿದ್ಯಾರ್ಥಿಗಳಿಗೆ ಮನನ ಮಾಡಿಸುವುದಕ್ಕಾಗಿ 'ಶಿವಶರಣರ ವಚನಗಳು', ಚಿಕವೀರ ರಾಜೇಂದ್ರ ಕಾದಂಬರಿಯಿಂದ ಆಯ್ದ ಭಾಗ 'ಪಡಿ' ಮತ್ತು ಪಂಪಭಾರತ ಕಾವ್ಯದಿಂದ ಆಯ್ದ ಭಾಗ 'ಪಿಡಿಯೆಂ ಪುರಿಗಣೆಯಂ' ಎಂಬ ಪಾಠಗಳನ್ನು ಕೊಡಲಾಗಿದೆ. ನಾವೆಲ್ಲ ಇಂತಹ ಮೌಲ್ಯಯುತವಾದ ಪಾಠ ಗಳನ್ನು ಓದಿ ಉತ್ತಮ ಸಮಾಜ ನಿರ್ಮಾಣಕ್ಕೆ ಕಟಿಬದ್ಧರಾಗೋಣ.

- ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
  ಮತಿಯಿಂದ ದುಡಿಯಿರೈ ಲೋಕಹಿತಕೆ
  ಆ ಮತದ ಈ ಮತದ ಹಳೆಮತದ ಸಹವಾಸ
  ಸಾಕಿನ್ನು ಸೇರಿರೈ ಮನುಜಮತಕೆ

  ಕುವೆಂಪು

- ವಿವಿಧ ಜಾತಿ, ಮತ, ಭಾಷೆಗಳೆಲ್ಲಕು
  ಕಟ್ಟಿ ಸ್ನೇಹಸೇತು
  ಮಾನವೀಯ ಮಮತೆಯ ಸಂಚಾರಕೆ
  ಮುಕ್ತದ್ವಾರ ತಳೆದು

  ಎಂ. ಅಕಬರ ಆಲಿ

ಮೇಲಿನ ಕವನಗಳ ಸಾಲುಗಳ ಆಶಯಗಳನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಬರೆದು ಮಂಡಿಸಿರಿ.

# ಶಿವಶರಣರ ವಚನಗಳು



- ಉಳ್ಳವರು ಶಿವಾಲಯವ ಮಾಡುವರು
  ನಾನೇನ ಮಾಡುವೆ ಬಡವನಯ್ಯಾ
  ಎನ್ನ ಕಾಲೇ ಕಂಬ ದೇಹವೇ ದೇಗುಲ
  ಶಿರವೇ ಹೊನ್ನ ಕಳಸವಯ್ಯಾ
  ಕೂಡಲಸಂಗಮದೇವಾ, ಕೇಳಯ್ಯ
  ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ

- ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ
  ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ
  ಆಚಾರವೇ ಸ್ವರ್ಗ; ಅನಾಚಾರವೇ ನರಕ
  ಕೂಡಲಸಂಗಮದೇವಾ, ನೀವೇ ಪ್ರಮಾಣಿ

- ನುಡಿದರೆ ಮುತ್ತಿನ ಹಾರದಂತಿರಬೇಕು
  ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
  ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
  ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
  ನುಡಿಯೊಳಗಾಗಿ ನಡೆಯದಿದ್ದಡೆ
  ನಮ್ಮ ಕೂಡಲಸಂಗಮದೇವನೆಂತೊಲಿವನಯ್ಯ

**ಬಸವಣ್ಣ**

- ಗಿರಿಯಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು?
  ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸೆ?
  ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
  ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ ?
  ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವುದೆ ಎನ್ನ ಮನ?
  ಪೇಳಿರೇ, ಕೆಳದಿಯರಿರಾ?



ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದು
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು
ವಚನಕ್ಕೆ ಶೃಂಗಾರ ಸತ್ಯವ ನುಡಿವುದು
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ

**ಅಕ್ಕಮಹಾದೇವಿ**

## ಕವಿ ಪರಿಚಯ

### ಬಸವಣ್ಣ

ಬಸವಣ್ಣನವರು ೧೨ ನೇ ಶತಮಾನದ ಪ್ರಸಿದ್ಧ ಶಿವಶರಣರು ಮತ್ತು ವಚನಕಾರರು. ಇವರು ಕರ್ನಾಟಕದ ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಕ್ರಿ. ಶ ೧೧೩೪ ರಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಬಸವಣ್ಣನವರು ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು. ಸಮಾಜ ಸುಧಾರಣೆಗೆ ಅವಿರತವಾಗಿ ದುಡಿದ ಇವರು ಲಿಂಗತಾರತಮ್ಯ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳನ್ನು ನಿರಾಕರಿಸಿದರು. ಅನುಭವಮಂಟಪವನ್ನು ಸ್ಥಾಪಿಸಿದರು. 'ಕಾಯಕವೇ ಕೈಲಾಸ' ಎಂದು ಬಲವಾಗಿ ನಂಬಿದ್ದ ಬಸವಣ್ಣನವರು ಸಮಾಜವನ್ನು ದುಡಿಯುವ ಪಥದಲ್ಲಿ ಮುನ್ನಡೆಸಿದರು. 'ಕೂಡಲಸಂಗಮದೇವ' ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿದ ಇವರು ಕ್ರಿ. ಶ ೧೧೯೬ರಲ್ಲಿ ಕೂಡಲಸಂಗಮದಲ್ಲಿ ಲಿಂಗೈಕ್ಯರಾದರು.

## ಅಕ್ಕಮಹಾದೇವಿ

ಅಕ್ಕಮಹಾದೇವಿ ಕನ್ನಡದ ಶಿವಶರಣೆ ಮತ್ತು ಶ್ರೇಷ್ಠ ವಚನಕಾರ್ತಿ. ಸುಮಾರು ಹನ್ನೆರಡನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಸಮೀಪದ ಉಡುತಡಿ ಗ್ರಾಮದ ನಿರ್ಮಲ ಮತ್ತು ಸುಮತಿ ದಂಪತಿಯ ಪುತ್ರಿಯಾಗಿ ಇವರು ಜನಿಸಿದರು. ಪರಮ ಶಿವಭಕ್ತೆಯಾಗಿದ್ದ ಇವರ ಆರಾಧ್ಯ ದೇವರು ಚೆನ್ನಮಲ್ಲಿಕಾರ್ಜುನ. ಇದೇ ಅಂಕಿತವನ್ನಿಟ್ಟು ಇವರು ಹಲವಾರು ವಚನಗಳನ್ನು ರಚಿಸಿದ್ದಾರೆ. ಇವರು ಕನ್ನಡ ಸಾಹಿತ್ಯದ ಮೊದಲನೆಯ ಕವಯತ್ರಿ ಎಂದು ಖ್ಯಾತರಾಗಿದ್ದಾರೆ. ಇವರ ವಚನಗಳು ಭಕ್ತಿ, ವೈರಾಗ್ಯ, ಜ್ಞಾನಸಂಪನ್ನವಾಗಿದ್ದು ಕಾವ್ಯ ಸೌಂದರ್ಯದಿಂದ ಕೂಡಿವೆ.

### ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಬಸವಣ್ಣನವರು ತನ್ನ ದೇಹವನ್ನೇ ದೇಗುಲವನ್ನಾಗಿ ಕಲ್ಪಿಸಿಕೊಂಡ ಬಗೆ ಹೇಗೆ?

೨. ಬಸವಣ್ಣನವರ ಅಭಿಪ್ರಾಯದಂತೆ ದೇವ ಲೋಕ ಮತ್ತು ಮರ್ತ್ಯಲೋಕಗಳು ಯಾವುವು?

೩. ಮಾತು ಹೇಗಿರಬೇಕು ಎಂದು ಬಸವಣ್ಣನವರು ಹೇಳಿದ್ದಾರೆ ?

೪. ಚೆನ್ನಮಲ್ಲಿಕಾರ್ಜುನನ ಮೇಲಿರುವ ತನ್ನ ಗಾಢ ಭಕ್ತಿಯನ್ನು ಅಕ್ಕಮಹಾದೇವಿಯವರು ಹೇಗೆ ಸಮರ್ಥಿಸಿಕೊಂಡಿದ್ದಾರೆ?

೫. ಯಾವುದನ್ನು ಉತ್ತಮವಾದ ಬದುಕು ಎಂದು ಅಕ್ಕಮಹಾದೇವಿಯವರು ಹೇಳುತ್ತಾರೆ?

### ಆಶಯ ಬರೆಯಿರಿ

- ‘ಶಿವಶರಣರ ವಚನ’ಗಳ ಆಶಯಗಳನ್ನು ಬರೆಯಿರಿ.

### ಸ್ವಾರಸ್ಯ ಬರೆಯಿರಿ

- ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ.

  * ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ
    ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ

## ಹೋಲಿಸಿ ಬರೆಯಿರಿ

- ಪಾಠದಲ್ಲಿ ಬಂದಿರುವ ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು' ವಚನವನ್ನು ಕೆಳಗೆ ನೀಡಿರುವ ಪುರಂದರ ದಾಸರ ಕೀರ್ತನೆಯೊಂದಿಗೆ ಹೋಲಿಸಿ ಬರೆಯಿರಿ.

### ಆಚಾರವಿಲ್ಲದ ನಾಲಗೆ

ಆಚಾರವಿಲ್ಲದ ನಾಲಗೆ ನಿನ್ನ
ನೀಚಬುದ್ಧಿಯ ಬಿಡು ನಾಲಗೆ

ವಿಚಾರವಿಲ್ಲದೆ ಪರರ ದೂಷಿಪುದಕ್ಕೆ
ಚಾಚಿ ಕೊಂಡಿರುವಂಥ ನಾಲಗೆ

ಇದ್ದ ಮಾತನಾಡು ನಾಲಗೆ ಹಿಡಿ
ದೊದ್ದರೂ ಹುಸಿಬೇಡ ನಾಲಗೆ
ಇದ್ದುಕೊಂಡು ಉಣ್ಣು ಅಮೃತಾನ್ನಗಳನು
ಬುದ್ಧಿಯಲಿರು ಕಂಡೆಯ ನಾಲಗೆ



ಹರಿಪಾದವೆ ಗತಿಯೆನ್ನು ನಾಲಗೆ - ನಿನಗೆ
ಪರರ ಚಿಂತೆಯೇಕೆ ನಾಲಗೆ
ಸಿರಿವರ ಪುರಂದರ ವಿಠ್ಠಲರಾಯನನು
ಮರೆಯದೆ ನೆನೆ ಕಂಡೆಯ ನಾಲಗೆ

ಪುರಂದರ ದಾಸ

## ಟಿಪ್ಪಣಿ ಬರೆಯಿರಿ

ನಮ್ಮ ಜೀವನದಲ್ಲಿ ಯಾವ ಯಾವ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ಶಿವಶರಣರ ವಚನಗಳ ಆಧಾರದಲ್ಲಿ ಟಿಪ್ಪಣಿ ಬರೆಯಿರಿ.

## ತದ್ಭವ ಬಳಸಿ ವಾಕ್ಯ ರಚಿಸಿರಿ

- ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ.

  * ವಸಂತಕಾಲದಲ್ಲಿ ವೃಕ್ಷಗಳು ಹೂವುಗಳಿಂದ <u>ಶೃಂಗಾರ</u>ಗೊಂಡು ಕಂಗೊಳಿಸಿದವು.

  ಆಭರಣಗಳಿಂದ <u>ಸಿಂಗಾರ</u>ಗೊಂಡ ಮದುಮಗಳು ನೆರೆದವರ ಮನಸೆಳೆದಳು.

ಇಲ್ಲಿ ಶೃಂಗಾರ ಎಂಬುದು ಸಂಸ್ಕೃತ ಪದ. ಸಿಂಗಾರ ಎಂಬುದು ಅದರ ತದ್ಭವ ರೂಪ.

ಇದೇ ರೀತಿ ಪಾಠದಲ್ಲಿ ಬಂದಿರುವ ಸಂಸ್ಕೃತ ಪದಗಳನ್ನು ಗುರುತಿಸಿ ಅವುಗಳ ತದ್ಭವ ರೂಪಗಳನ್ನು ಬರೆದು ವಾಕ್ಯ ರಚಿಸಿರಿ.

## ಸಂಧಿ ತಿಳಿಯಿರಿ

- ಸಂಭಾಷಣೆಗೆ ಶೃಂಗಾರ <u>ಸದ್ಭಕ್ತ</u>ರ ನುಡಿಗಡಣ

ಮೇಲಿನ ಸಾಲಿನಲ್ಲಿ ಅಡಿಗೆರೆ ಎಳೆದ ಪದವನ್ನು 'ಸತ್ + ಭಕ್ತ' ಎಂದು ವಿಂಗಡಿಸಲಾಗುತ್ತದೆ. ಇಲ್ಲಿ ಸಂಧಿಯಾಗುವಾಗ ಪೂರ್ವ ಪದದ ಕೊನೆಯ 'ತ್' ಎಂಬ ವ್ಯಂಜನಾಕ್ಷರಕ್ಕೆ 'ದ್' ಎಂಬ ವ್ಯಂಜನಾಕ್ಷರವು ಆದೇಶವಾಗಿ ಬರುತ್ತದೆ. ಇದೇ ರೀತಿಯಲ್ಲಿ ಸಂಧಿ ಕಾರ್ಯ ನಡೆಯುವಾಗ ಪೂರ್ವ ಪದದ ಕೊನೆಯಲ್ಲಿರುವ ವರ್ಗೀಯ ವ್ಯಂಜನಗಳ ಪ್ರಥಮಾಕ್ಷರಗಳಾದ 'ಕ್, ಚ್, ಟ್, ತ್, ಪ್' ಗಳಿಗೆ ಯಾವ ಅಕ್ಷರ ಎದುರಾದರೂ ಅದೇ ವರ್ಗದ ಮೂರನೆಯ ಅಕ್ಷರಗಳಾದ 'ಗ್, ಜ್, ಡ್, ದ್, ಬ್' ಗಳು ಆದೇಶವಾಗಿ ಬರುತ್ತವೆ. ಇಂತಹ ಸಂಧಿಯನ್ನು 'ಜಶ್ತ್ವ ಸಂಧಿ' ಎಂದು ಕರೆಯುತ್ತಾರೆ. ಇದೊಂದು ಸಂಸ್ಕೃತ ಸಂಧಿಯಾಗಿದೆ.

**ಉದಾಹರಣೆಗಳು :**

- ದಿಕ್ + ಅಂತ – ದಿಗಂತ
- ಅಚ್ + ಅಂತ – ಅಜಂತ
- ಷಟ್ + ಆನನ – ಷಡಾನನ
- ಸತ್ + ಆನಂದ – ಸದಾನಂದ
- ಅಪ್ + ಜ – ಅಬ್ಜ

- ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿಯನ್ನು ಗುರುತಿಸಿ ಬರೆಯಿರಿ.

ಕಳಸವಯ್ಯಾ, ಸ್ಥಾವರಕ್ಕಳಿವು, ಅಹುದಹುದು, ಬರಗಾಲ, ಮರ್ತ್ಯಲೋಕವೆಂಬುದು, ಗಿರಿಯಲಲ್ಲದೆ, ಸದ್ಗುಣ, ಸಿರಿಗನ್ನಡ, ಶಿವಾಲಯ, ಪರಿಮಳವಿಲ್ಲದ, ಬಡವನಯ್ಯಾ, ವಾಗ್ದಾನ, ಸದಭಿಮಾನ, ಕಂಬನಿ, ಗಿರೀಶ

## ಸಂಚಿಕೆ ತಯಾರಿಸಿರಿ

ಶಿವಶರಣರು ರಚಿಸಿದ ಜೀವನ ಮೌಲ್ಯಗಳನ್ನು ಒಳಗೊಂಡಿರುವ ಇತರ ವಚನಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

# ಪಡಿ

ಮಾಸ್ತಿ ವೆಂಕಟೇಶ ಅಯ್ಯಂಗಾರ್

**ಕಥಾ ಸಂದರ್ಭ**

(ಇಕ್ಕೇರಿಯ ರಾಜವಂಶಕ್ಕೆ ಸೇರಿದ ಉದ್ದಿನಿಯು ಕೊಡಗಿಗೆ ಬಂದು ಹಿಂದಿನ ರಾಜವಂಶವನ್ನು ನಿರ್ಮೂಲನೆ ಮಾಡಿ ಜನರ ಅಪೇಕ್ಷೆಯಂತೆ ತಾನೇ ಕೊಡಗಿನ ದೊರೆಯಾಗುತ್ತಾನೆ. ಈ ವಂಶದವರು ಕೊಡಗನ್ನು ಸುಮಾರು ಇನ್ನೂರು ವರ್ಷಕ್ಕಿಂತಲೂ ಹೆಚ್ಚು ಕಾಲ ಆಳುತ್ತಾರೆ. ಈ ವಂಶದಲ್ಲಿ ಜನಿಸಿದ ದೊಡ್ಡವೀರ ರಾಜನು ೧೭೮೯ ರಿಂದ ೧೮೦೯ ರ ವರೆಗೆ ಕೊಡಗಿನ ರಾಜನಾಗಿ ಆಡಳಿತ ನಡೆಸುತ್ತಾನೆ. ಈತನ ಅನಂತರದಲ್ಲಿ ಈತನಿಗೆ ತನ್ನ ಮಗಳಾದ ದೇವಮ್ಮಾಜಿಯು ಕೊಡಗನ್ನು ಆಳಬೇಕು ಎಂಬ ಇಚ್ಛೆ ಇತ್ತು. ತಂದೆಯ ಅಭಿಲಾಷೆಯಂತೆ ಮಗಳು ದೇವಮ್ಮಾಜಿ ಕೊಡಗಿನ ಆಡಳಿತದ ಗಾದಿಯನ್ನೇರಿದಳು. ಆದರೆ ದೊಡ್ಡವೀರ ರಾಜನ ಸಹೋದರ ಲಿಂಗರಾಜನು ಇದನ್ನು ವಿರೋಧಿಸುತ್ತಾನೆ. ಅಧಿಕಾರಕ್ಕಾಗಿ ಹಠಮಾಡಿದ ಲಿಂಗರಾಜನು ದೇವಮ್ಮಾಜಿಯ ಆಡಳಿತದಲ್ಲಿ ಕೊಡಗಿನ ದಿವಾನನಾಗಿ ನೇಮಕಗೊಳ್ಳುತ್ತಾನೆ. ಆಮೇಲೆ ದೇವಮ್ಮಾಜಿಯನ್ನೇ ಪಟ್ಟದಿಂದ ಇಳಿಸಿ ತಾನೇ ರಾಜನಾಗುತ್ತಾನೆ. ಈತ ೧೮೧೧ ರಿಂದ ೧೮೨೦ ರ ವರೆಗೆ ಕೊಡಗನ್ನು ಆಳುತ್ತಾನೆ. ಬಳಿಕ ಅವನ ಮಗ ಇಪ್ಪತ್ತು ವರ್ಷ ವಯಸ್ಸಿನ ಚಿಕವೀರರಾಜನು ಕೊಡಗಿನ ದೊರೆಯಾಗುತ್ತಾನೆ. ಈತನ ಮಡದಿ ಗೌರಮ್ಮಾಜಿ. ಕೊಡಗಿನ ರಾಜ ವಂಶದಲ್ಲಿ ಇವನು ಕೊನೆಯ ಅರಸ. ಇವನ ಕಾಲದಲ್ಲಿ ಕೊಡಗು ಆಂಗ್ಲರ ಕೈವಶವಾಗುತ್ತದೆ.

ದೊಡ್ಡವೀರರಾಜನ ಕಾಲದಲ್ಲಿ ಶತ್ರುಗಳು ಭಾಗಮಂಡಲ ಪ್ರದೇಶವನ್ನು ಆಕ್ರಮಿಸಿದ ಪರಿಣಾಮವಾಗಿ ಹಾರುವರು ಆ ಪ್ರದೇಶವನ್ನು ತೊರೆದು ಹೋಗುತ್ತಾರೆ. ಇದರಿಂದ ಭಾಗಮಂಡಲದ ದೇವರಿಗೆ ಪೂಜೆ ತಪ್ಪುವ ಸ್ಥಿತಿಯಾಗುತ್ತದೆ. ಆಗ ಕೊಡಗಿನ ಉತ್ತಯ್ಯತಕ್ಕ ಎಂಬಾತ ಕೊಡಗಿನಿಂದ ಒಬ್ಬ ಬ್ರಾಹ್ಮಣ ಬಾಲಕನನ್ನು ದಿನವೂ ಹೊತ್ತು ತಂದು ಭಾಗಮಂಡಲದ ದೇವರಿಗೆ ಪೂಜೆ ತಪ್ಪದಂತೆ ನೋಡಿಕೊಳ್ಳುತ್ತಾನೆ. ಶತ್ರುಗಳು ತೊಲಗಿದ ಮೇಲೆ ಈ ಸಂಗತಿ ತಿಳಿದು ದೊಡ್ಡವೀರರಾಜನು ಉತ್ತಯ್ಯತಕ್ಕನಿಗೆ ಮರ್ಯಾದೆಯಾಗಿ ಅರಮನೆಯ ಪಡಿಯನ್ನು ಕೊಡುವ ಏರ್ಪಾಡು ಮಾಡುತ್ತಾನೆ. ನವರಾತ್ರಿಯ ಹಬ್ಬದ ಸಮಯ ದೊಡ್ಡ ಸಭೆಯಲ್ಲಿ ಇವನನ್ನು ಹೊಗಳಿ ಪಡಿಯನ್ನು ನೀಡುತ್ತಾರೆ. ಈ ಪದ್ಧತಿಯನ್ನು ಲಿಂಗರಾಜನೂ ಮುಂದುವರಿಸುತ್ತಾನೆ. ಆದರೆ ಚಿಕವೀರರಾಜನ ಕಾಲದಲ್ಲಿ ಮಂತ್ರಿ ಬಸವಯ್ಯನ ಕುತಂತ್ರದಿಂದ ಉತ್ತಯ್ಯತಕ್ಕನಿಗೆ ನೀಡುತಿದ್ದ ಪಡಿಯನ್ನು ಕಾರಣಾಂತರಗಳಿಂದ ನಿಲ್ಲಿಸಲಾಗುತ್ತದೆ. ನಿಲ್ಲಿಸಲಾದ ಪಡಿಯನ್ನು ಮರಳಿ ನೀಡಬೇಕು ಎಂದು ಉತ್ತಯ್ಯತಕ್ಕ ಹಿರಿಯ ಮಂತ್ರಿಗಳಾದ ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯರಿಗೆ ವಿಷಯ ತಿಳಿಸುತ್ತಾನೆ. ಅವರ ಸಲಹೆಯಂತೆ ಅರಸನಲ್ಲಿ ವಿನಂತಿಸುತ್ತಾನೆ.)

ಉತ್ತಯ್ಯತಕ್ಕನ ಪಡಿ ನಿಂತಿರುವ ಸಂಗತಿಯನ್ನು ಚರ್ಚಿಸಲು ಬೋಪಣ್ಣ ಆ ಸಂಜೆ ಲಕ್ಷ್ಮೀನಾರಾಯಣಯ್ಯನ ಮನೆಗೆ ತಕ್ಕನೊಡನೆ ಹೋದನು. ಲಕ್ಷ್ಮೀನಾರಾಯಣಯ್ಯ ಅವರಿಬ್ಬರನ್ನೂ ಪ್ರೀತಿಯಿಂದ ಬರಮಾಡಿಕೊಂಡನು. ಬೋಪಣ್ಣ ಅವನಿಗೆ ''ನೀವು ನನಗೆ ಹೇಳಿಕಳುಹಿಸಿದ ಹೊತ್ತಿಗೆ ನಾನೇ ನಿಮ್ಮನ್ನು ಕಾಣಬೇಕಾದ ಮಾತನ್ನು ತಕ್ಕರು ತಂದರು. ಅದಕಾಗಿ ಇಲ್ಲಿಗೇ ಬರತೇನೆ ಅಂತ ಹೇಳಿಕಳುಹಿಸಿದೆ. ನಿಮ್ಮ ಮಾತು ಮೊದಲು ಹೇಳತೀರಾ, ನಮ್ಮ ಮಾತು ಮೊದಲು ಹೇಳಲಾ?'' ಎಂದನು.

ಲಕ್ಷ್ಮೀನಾರಾಯಣಯ್ಯ, ''ಅದನ್ನು ನೋಡೋಣ, ಸ್ವಲ್ಪ ಇತ್ತ ಬನ್ನಿ,'' ಎಂದು ಅವನನ್ನು ಕರೆದುಕೊಂಡು ಹೋಗಿ ಪಾಣೇ ಸೂರ್ಯನಾರಾಯಣನ ಕಥೆಯನ್ನು ವಿವರಿಸಿದನು. ಬೋಪಣ್ಣ ಉತ್ತಯ್ಯನ ಕಥೆಯನ್ನು ಹೇಳಿದನು.

ಒಳಗೆ ಈ ಮಾತನ್ನು ಮುಗಿಸಿಕೊಂಡು ಇವರಿಬ್ಬರೂ ಹೊರಕ್ಕೆ ಬಂದರು.

ಹೊರಗಡೆ ಕೋಣೆಯಲ್ಲಿ ಲಕ್ಷ್ಮೀನಾರಾಯಣಯ್ಯ, ಬೋಪಣ್ಣ, ಉತ್ತಯ್ಯತಕ್ಕ ಸ್ವಲ್ಪ ಹೊತ್ತು ಮಾತನಾಡಿದರು. ಲಕ್ಷ್ಮೀನಾರಾಯಣಯ್ಯ ಮಾರನೆಯ ದಿನ ಅರಸನನ್ನು ಕಂಡು ಸೂರ್ಯನಾರಾಯಣ ಬಂದಿರುವುದನ್ನು ತಿಳಿಸುವುದು ಎಂದು ನಿಶ್ಚಯ ಮಾಡಿದರು. ಈ ಮಾತು ಮುಗಿದ ಮೇಲೆ ಸೂರ್ಯನಾರಾಯಣ ನನ್ನು ಕಳುಹಿಸಿಕೊಟ್ಟು ಉತ್ತಯ್ಯತಕ್ಕನ ದೂರನ್ನು ಕುರಿತು ಯೋಚನೆ ಮಾಡಿದರು. ಪಡಿಯ ಮಾತು ಮಾತ್ರ ತೀರ ಅವಶ್ಯಕವಾಗಿ ನಿರ್ಣಯಕ್ಕೆ ಬರಬೇಕು. ಅರಸೇ ಅಪ್ಪಣೆ ಮಾಡಿದ್ದರೂ ಸರಿಯೇ ಬಸವನೇ ಸ್ವತಂತ್ರಿಸಿದ್ದರೂ ಸರಿಯೇ ಇವರು ಇಂಥ ಕಟ್ಟಲೆಯನ್ನು ನಿಲ್ಲಿಸುವ ಧಾರ್ಷ್ಟ್ಯವನ್ನು ಇನ್ನು ಮುಂದೆ ಮಾಡದಂತೆ ಏರ್ಪಾಡು ಮಾಡಬೇಕು, ಮೊದಲು ತಕ್ಕ ಅರಸನನ್ನು ಕಂಡು ಆಗಿರುವ ಸಂಗತಿಯನ್ನು ತಿಳಿಸಿ ಪಡಿಯನ್ನು ಕೊಡಿಸಿಕೊಡಬೇಕು ಎಂದು ಬೇಡುವುದು, ಅದನ್ನು ಅವನು ಮಾಡದೇ ಇದ್ದರೆ ಮಂತ್ರಿಗಳು ಈ ವಿಷಯವನ್ನೆತ್ತಿಕೊಂಡು ಮುಂದಿನ ಕ್ರಮ ನಡೆಸತಕ್ಕದ್ದು. ಇಷ್ಟು ಮಾತಾದ ಮೇಲೆ ಬೋಪಣ್ಣ, ಉತ್ತಯ್ಯತಕ್ಕ ಲಕ್ಷ್ಮೀನಾರಾಯಣಯ್ಯನ ಮನೆಯಿಂದ ಹೊರಟುಬಂದರು.

ಆ ಸಂಜೆ ಬೋಪಣ್ಣನ ಕರಣಿಕ ಅರಮನೆಗೆ ಹೋಗಿ 'ಉತ್ತಯ್ಯತಕ್ಕ ಬಂದಿದಾರೆ, ಬೆಳಗಾಗ ಅರಸರನ್ನ ಕಾಣಬಹುದೇ?'' ಎಂದು ಬಸವನನ್ನು ಕೇಳಿದನು. ಉತ್ತಯ್ಯ ಏತಕ್ಕೆ ಬಂದಿದ್ದಾನೆ ಎನ್ನುವುದು ಬಸವನಿಗೆ ತಿಳಿದ ವಿಷಯ. ಅವನು ಅರಸನ ಬಳಿಗೆ ಹೋಗಿ ಈ ಮಾತನ್ನು ಹೇಳಿದನು.

''ಬರಹೇಳು, ಪಡಿ ಹಿಂದಕ್ಕೆ ಕೊಟ್ಟರೂ ಆಯಿತು. ಅಪ್ಪಾಜಿಯವರಿಗೆ ಬೇಕಾಗಿದ್ದೋನು.''

''ದಣಿಗಳ ಅಪ್ಪಣೆ ಒಡೇರೆ''

ಮಾರನೆಯ ಬೆಳಗ್ಗೆ ಉತ್ತಯ್ಯತಕ್ಕ ಬಂದನು. ಬಸವ ಆತನನ್ನು ಬರಮಾಡಿಕೊಂಡು ಅರಸನ ಬಳಿಗೆ ಒಯ್ದನು. ಮುದುಕ ಅರಸನ ಹತ್ತಿರಕ್ಕೆ ಬಂದು ಕೈಮುಗಿದು, ''ಕೈಮುಗಿದೆ ಪುಟ್ಟಪ್ಪಾಜಿ, ಸೌಖ್ಯವಾಗಿದ್ದೀರಾ''ಎಂದು ತುಂಬ ಪ್ರೀತಿಯಿಂದಲೇ ಕೇಳಿದನು.

ಅರಸನಿಗೆ ಥಟ್ಟನೆ ಚಿಕ್ಕಂದಿನ ನೆನಪು ಬಂದಿತು. ಅವನು, ''ಬನ್ನಿ ತಕ್ಕರೆ, ಕೂಡಿರಿ. ನೀವು ಸೌಖ್ಯವೋ'' ಎಂದನು.

ತಕ್ಕ ಕೈಮುಗಿದುಕೊಂಡೇ ರಾಜನ ಎದುರಿನಲ್ಲಿ ಜಮಖಾನದ ಮೇಲೆ ಕುಳಿತನು.

ಅರಸ, ''ಏನು ಬಂದಿರಿ ತಕ್ಕರು? ಪಡೀ ಮಾತು ಏನೊ ಇರಬೇಕು ಅಂದ ಬಸವ.'' ಎಂದನು.

ತಕ್ಕ: ''ಹೌದು, ದೊಡ್ಡರಾಜರು ಕೊಡಿಸಿದ ಪಡಿ ಅದು. ನಾನು ಹಾರುವರ ಹೈದನ್ನ ಹೊತ್ತು ಮೂರು ತಿಂಗಳ ದಿನಾ ಗುಡೀಲಿ ಪೂಜೆ ನಿಲ್ಲದೆ ನೋಡಿಕೊಂಡಾಗ ಅರಸರಿಂದ ಪಡಿ ಸಂಪಾದಿಸಬೇಕು ಅನ್ನೋ ಆಸೆಗೆ ಅಲ್ಲ ಅದಮಾಡಿದ್ದು. ದೇವರ ಶಾವೆ ಅಂತ ಮಾಡಿದೆ. ಅರಸರು ಬಾಯಿಬಿಟ್ಟು ಹೇಳಿದರು - 'ಉತ್ತಯ್ಯ, ನಮ್ಮ ತಲೆ ಉಳಿಸಿಕೊಳ್ಳೋದರಲ್ಲಿ ನಾವು ದೇವರ ಗತಿ ಏನು ಅಂತ ಯೋಚನೆ ಮಾಡಲ್ಲ. ನೀನು ನಿಜವಾಗಿ ಗಂಡು, ದೇವರ ಭಂಟ. ಉಸರು ನಿನದು ಅಲ್ಲ ಅಂತ ಪೂಜೇನ ನಡೆಸಿಬಿಟ್ಟೆ. ಹತ್ತು ಜನದ ದೇವರಿಗೆ ಒಬ್ಬ ಇಂಥ ಸೇವೆ ಮಾಡಿದೆ. ಇಂಥ ಲೆಂಕನ್ನ ದೇವರು ಕೈಬಿಡೋದಿಲ್ಲ. ಅಂದರೆ ದೇವರು ನೋಡಿಕೋತಾರೇಂತ ಸುಮ್ಮನಿದ್ದರೆ ನಾವು ಅರಸರಲ್ಲ. ತಕೊ, ಅರಮನೆ ಎಡೆ. ದೇವರಿಗೆ ಪಡಿ ನಡೆಸೊ ಹಂಗೆ ಅವರ ಲೆಂಕನಿಗೆ ಪಡಿ. ದಿನಕ್ಕೆ ಒಂದು ಪಡಿ ಭತ್ಯ ನಿನಗೆ. ನಿನಗೆ ಮನೆ ತುಂಬಾ ಕಾಳು ಉಂಟು. ಅದು ದೇವರು ಕೊಟ್ಟದ್ದು. ಈ ಇನ್ನೊಂದು ಪಡಿ ದೇವರು ಕೊಡಿಸಿದ್ದು' ಅಂದರು.''

''ಸರಿ, ಈಗ ಬಂದ ಮಾತು ಹೇಳಿರಿ.''

''ಹೇಳತೀನಿ ಸ್ವಲ್ಪ ಕೇಳಿ. ನಿಮ್ಮ ತಂದೆಯವರು ನನ್ನ ಗೆಣೆಯನಾಗಿ ಕಂಡರು. ಆ ದಿವಸದಲ್ಲೆ ನೀವು ಹುಟ್ಟಿದ್ದು. ನಿಮ್ಮ ತಂದೆ ನನ್ನ ಕೈಗೆ ಕೊಟ್ಟು ನಾನು ನಿಮ್ಮನ್ನ ಎತ್ತಿ ಆಡಿಸಿ ಮುದ್ದಿಸಿದ್ದು ಉಂಟು ಒಡೆಯರೆ. ನೀವು ಹಸುಮೊಗ ಆಗಿದ್ದಾಗ ನಾ ನಿಮ್ಮನ್ನ ಆಡಿಸಿದ್ದೀನಿ. ಎತ್ತಿಕೊಂಡಿದ್ದೀನಿ.''

ಅರಸ ಏನಾದರೂ ಹೇಳಲೆಂದೇ ಮುದುಕ ಮಾತನ್ನು ಸ್ವಲ್ಪ ನಿಲ್ಲಿಸಿದನು. ಅರಸ ಏನನ್ನೂ ಹೇಳಲಿಲ್ಲ, ಉತ್ತಯ್ಯ ಮಾತನ್ನು ಮುಂದರಿಸಿದನು. ''ದೊಡ್ಡ ರಾಜರ ದಿನದಲ್ಲಿ ಈ ಪಡೀನ ಮಾನೋಮಿ ಹಬ್ಬದಾಗೆ ಸಲ್ಲಿಸುತ್ತಿದ್ದರು. ನಿಮ್ಮ ತಂದಿ ನಾಲ್ಕು ವರ್ಷ ಹಂಗಮಾಡಿ, 'ತಿರುಪೇಗೆ ಹಚ್ಚಡ ಹರವಿದ ಹಂಗೆ ಇದಕ್ಕೆ ಮಡಕೇರಿಗೆ ಏನು ಬರತಿ, ಊರಾಗೆ ತಕೊ,' ಅಂದರು. 'ಕೊಡು ಅಂತ ಕರಣೀಕನಿಗೆ ಹೇಳತೀನಿ,' ಅಂದರು. ನೀವೂ ಅದನೆ

ನಡೆಸಿಕೊಟ್ಟಿರಿ. ಈ ವರ್ಷದವರೆಗೆ. ಈ ವರ್ಷ ಕರಣೀಕರು, ‘ಪಡಿ ನಿಲ್ಲಿಸಿದ್ದಾರೆ’ ಎಂದರು. ‘ಯಾಕಪ್ಪಾ?’, ‘ನಮಗೆ ತಿಳಿಯದು’, ‘ಯಾರಪ್ಪಾ?’ ‘ಅರಮನೆ’ , ‘ಅರಮನೇಲಿ ಯಾರಪ್ಪಾ?’, ‘ನಮಗೆ ತಿಳೀದು’ , ‘ನಿಲ್ಲಿಸು ಅಂದವರ್ಯಾರು?’ , ‘ಮಂತ್ರಿಗಳು’ , ‘ಯಾವ ಮಂತ್ರಿಗಳು?’ , ‘ನಮಗೆ ತಿಳೀದು’ , ‘ಆಯಿತಪ್ಪಾ, ದೊಡ್ಡರಾಜರ ದಿನದಲ್ಲಿಹಬ್ಬದ ದಿನ ಅರಸರ ಕೈಯಿಂದ ಸಂದಾಯ ಆದಂತೆ ಆಗಲಿ ಅಂತ ಮಾಡಿದ್ದಾರೇನೊ ಕೇಳಿ ತಿಳಿಯೋಣಾ’ ಅಂದೆ, ಬಂದೆ.’’

‘‘ನೆನ್ನೆ ಬಂದು ಬೋಪಣ್ಣನವರನ್ನ ಮಂತ್ರಿ ಅಯ್ಯನವರನ್ನ ಕಂಡೆ. ‘ಇದು ತಮ್ಮ ವಳಿತ ಅಲ್ಲ ಬಸವಯ್ಯ ನಡಸೋ ಕಾರಣ,’ ಅಂದರು. ಬಸವಯ್ಯನ್ನ ನಾನು ಏನು ಕೇಳೋದು ಅಂತ ನಿಮ್ಮನ್ನೆ ಕಾಣಬೇಕು ಅಂದೆ. ಬಂದಾಯಿತು. ಹೇಳಿಕೊಂಡಿದೀನಿ. ಇದನ್ನ ಸರಿಮಾಡಿ ಕಳಿಸಿಕೊಡಿರಿ. ‘‘ಮುದುಕ ಹ್ಯಾಗೂ ಬಂದಾಯಿತು. ಪಡಿ ತಿರುಗಿ ಕೊಡಿಸಿದಿರಿ ಸಂತೋಷ. ಕೊಡಿಸಲಿಲ್ಲ ದೊಡ್ಡವರು ಕೊಟ್ಟರು ಚಿಕ್ಕವರು ತಗೊಂಡರು. ನಾ ನಗತ ಮನೆಗೆ ಹೋಗುತೀನಿ, ಊರು ಏನಂತದೆ ತಿಳೀಬೇಕು. ದೊಡ್ಡವರ ಹಿಡೀಲಿ ನಾಡು ನಿಂತಿತ್ತು; ಚಿಕ್ಕವರ ಹಿಡೀಲಿ ಅವರ ಬೆರಳೆ ನಿಲ್ಲವೊಲ್ಲದಲ್ಲ! ಇದ ನೋಡಿ ನಾನು ಅಳಬೇಕಾಯಿತಲ್ಲಪ್ಪಾ, ಮುದುಕ! ದೊಡ್ಡ ರಾಜರು ಹೇಳತಿದ್ದ ಮಾತು , ನಿಮ್ಮ ತಂದೆ ಹೇಳತಿದ್ದ ಮಾತು, ಅವರಿಬ್ಬರೂ ಇಲ್ಲ, ನಾ ಹೇಳತೀನಿ. ಮಂತ್ರಿ ಅಯ್ಯನೋರನ್ನ, ಬೋಪಣ್ಣನೋರನ್ನ, ಯಾರನ್ನ ಕೇಳಿದರೂ ಹೇಳತಾರೆ ಬದುಕೋ ದಾರೀನ, ಕೇಳಬೇಕಾದ್ದೇನು, ನೀವೇ ಬಲ್ಲಿರಿ. ಕ್ಷಣ ಯೋಚನೆ ಮಾಡಿದರೆ ನಿಮಗೇ ಕಾಣುತದೆ. ಒಳ್ಳೇ ದಾರಿ ಹಿಡೀರಿ, ನೀವು ಬದುಕಿ , ನಾಡ ಬದುಕಿಸಿ. ಅಪ್ಪಣೆ ಆದರೆ ಬರುತೀನಿ,’’ಹೀಗೆಂದು ಉತ್ತಯ್ಯ ಎದ್ದನು. ಉತ್ತಯ್ಯ ಒಂದು ಹೆಜ್ಜೆಯಿಟ್ಟು ಮರಳಿ ದೊರೆಯ ಕಡೆಗೆ ತಿರುಗಿ , ‘‘ನಾಡ ಮಾತು ಹಂಗಿರಲಿ ಪುಟ್ಟಪ್ಪಾಜಿ; ಮೊದಲು ಈ ಮೈ ನೋಡಿಕೊಳ್ಳಿರಿ. ಅರವತ್ತು ವರ್ಷದ ಮುದುಕ ನಾನು . ಮುದುಕನಿಗೂ ಕೇಡಾಗಬಾರದು. ಮಾತು ಕಹಿಯಾಯಿತು ಅಂತ ಕೋಪ ಬೇಡ. ಅಪ್ಪನ ನೇಸ್ತ ಒಳ್ಳೇದಕ್ಕೆ ಹೇಳಿದ ಅಂದುಕೊಳ್ಳಿ ನಾ ಬರತೇನೆ. ಕೈಮುಗಿದೆ,’’ ಎಂದನು. ಬಾಗಿಲ ಬಳಿ ಇದ್ದ ಬಸವನ ಮೇಲೆ ನೋಟವನ್ನು ಕೂಡಾ ಹಾಯಿಸದೆ ಬಾಗಿಲಾಚೆಗೆ ನಡೆದನು.

ಉತ್ತಯ್ಯತಕ್ಕ ಅರಸನ ಸಜ್ಜೆಯನ್ನು ಬಿಟ್ಟು ಹತ್ತು ಹೆಜ್ಜೆ ನಡೆಯುವ ಹೊತ್ತಿಗೆ ಸೇವಕಿ ಒಬ್ಬಳು ಬಂದು, ‘‘ಅಮ್ಮಾಜಿ ನಿಮ್ಮನ್ನ ಒಸಿ ಬಂದು ಹೋಗಿ ಅಂತಾರೆ,’’ ಎಂದಳು

ಉತ್ತಯ್ಯ , ‘‘ಹಂಗಂದ್ರಾ ಅವ್ವ? ಇದ ಬಂದೆ,’’ ಎಂದನು. ಅವಳು ಅವನನ್ನು ರಾಣಿವಾಸದ ಕೈಸಾಲೆಗೆ ಕರೆದುಕೊಂಡು ಹೋದಳು.

ಇವನು ಹೋಗುವ ವೇಳೆಗೆ ರಾಣಿ ಅಲ್ಲಿ ಕಾದಿದ್ದಳು. ತಾನೆ ಮೊದಲಾಗಿ, ಕೈಮುಗಿದೆ ಅಜ್ಜ, ಬನ್ನಿರಿ, ಕೂಡಿರಿ. ಅರಮನೆಗೆ ಬಂದವರು ತೊಟ್ಟು ಹಾಲು ಕುಡಿದು ಹೋಗಿರಿ,’’ ಎಂದಳು.

ಮುದುಕನ ಬೇಸರ ಎತ್ತ ಹಾರಿ ಹೋಯಿತೋ. ಎದುರಿಗೆ ಇದ್ದ ಗಂಭೀರ ಪ್ರಸನ್ನ ಮೂರ್ತಿಯನ್ನು ಅವನ ಜೀವ ತುಂಬ ಮೆಚ್ಚಿಕೊಂಡಿತು; ಅವಳ ಮಾತಿಗಂತೂ ತನ್ನನ್ನೇ ಮಾರಿಕೊಂಡಿತು. ಅವನು, "ಬಂದೆ ಅಮ್ಮಾಜಿ, ನೀವು ರಾಣಿ ಕೈಮುಗೀಬಾರದು; ನಾನು ಮಂದೀತಕ್ಕ, ಕೈಮುಗೀತೀನಿ," ಎಂದನು.

"ಮಂದೀ ತಕ್ಕರೂ ಹೌದು, ಹಿರಿಯರಸರ ಗೆಳೆಯರೂ ಹೌದು. ಕೈಮುಗಿದ ಕಿರಿಯವಳಿಗೆ ಒಳ್ಳೆತಾಗಲಿ ಅಂತ ಹರಸಿರಿ. ಕೂಡಿರಿ."

ತಕ್ಕ ಅವಳು ತೋರಿಸಿದ ಸ್ಥಳದಲ್ಲಿ ಕುಳಿತನು. ಎದುರಿಗೆ ಸ್ವಲ್ಪ ದೂರದಲ್ಲಿ ತನ್ನ ಪೀಠದಲ್ಲಿ ಕುಳಿತುಕೊಳ್ಳುತ್ತ ರಾಣಿ ಸೇವಕಳಿಗೆ "ಪುಟ್ಟಮ್ಮಾಜಿಯವರನ್ನು ಬರಹೇಳು. ಅಜ್ಜಾವರಿಗೆ ಮಣಿಯಲಿ," ಎಂದಳು.

ರಾಜಕುಮಾರಿ ಸಜ್ಜೆಯಲ್ಲಿ ಇದ್ದಳು. ತಾಯಿ ಹೀಗೆನ್ನುತ್ತಲೆ ಕೈಸಾಲೆಗೆ ಬಂದಳು. "ಕೈಮುಗಿದೆ ಅಜ್ಜ,"ಎನ್ನುತ್ತ ಉತ್ತಯ್ಯನಿಗೆ ಕೈಜೋಡಿಸಿ ನಮಸ್ಕಾರ ಮಾಡಿ ತಾಯ ಹತ್ತಿರ ಬಂದು ನಿಂತಳು.

ಉತ್ತಯ್ಯ, "ಪುರುಳೀವುಲಿ. ದೊರೆ ಮಗಳು ಚೆಮ್ಮಾಯಿ ಇದ್ದೀರಾ, ತಂಗಿ? ಇತ್ತ ಬನ್ನಿ, ಅರಳೋ ಕೇದಗೆ, ಹತ್ತಿರ ನಿಂತು ಕಣ್ಣತುಂಬಿ," ಎಂದನು.

ರಾಣಿಗೆ ನಗೆ ಬಂದಿತು; ಅವಳು ಮಗಳೀಗೆ, "ಹತ್ತಿರ ನಿಲ್ಲು ಪುಟ್ಟಮ್ಮಾಜಿ, ಅಜ್ಜಾವರು ನೋಡಲಿ," ಎಂದಳು.

ರಾಜಕುಮಾರಿ ತುಸು ನಾಚಿಕೆಯಿಂದ ಮುದುಕನ ಎದುರಿಗೆ ಬಂದು ನಿಂತಳು.

ಹುಡುಗಿ ಬಂದು ಎದುರಿಗೆ ನಿಲ್ಲಲು, ಉತ್ತಯ್ಯ ಅವಳನ್ನು ತಲೆಯಿಂದ ಕಾಲವರೆಗೆ ನೋಡಿ, "ಕಾವೇರಿ ತಾಯಿ ಎದುರು ಬಂದ ಹಂಗೆ ಇದೀರಿ, ಚಿನ್ನದ ಪುತ್ಥಳಿ," ಎಂದನು.

ರಾಜಕುಮಾರಿ ಸಂತೋಷದಿಂದ ನಕ್ಕಳು; ನಾಚಿಕೊಂಡು ಹಿಂತಿರುಗಿ ಹೋಗಿ ತಾಯ ಬಳಿ ನಿಂತಳು.

ರಾಣಿ ಉತ್ತಯ್ಯನಿಗೆ, "ಹಿರಿಯರ ಮೆಚ್ಚಿಕೆಯೇ ಚೆಂದ. ಬೆಳೆದ ಮೊಮ್ಮಗಳನ್ನ ತಾತ ನೋಡಲಿಲ್ಲ. ತಾತನ ಗೆಳೆಯರು ಅವರಿಗೆ ಬದಲು ನೋಡಿದಿರಿ." ಎಂದಳು.

"ಹೌದಮ್ಮಾಜಿ. ನಿಮ್ಮ ಮಾವದಿರು ಇರಬೇಕಾಗಿತ್ತು; ಎಷ್ಟೋ ಮಾತಿಗೆ ಒಳಿತಾಗತಿತ್ತು."

"ದೇವರು ಅದ ಬೇಡ ಅಂದರಲ್ಲ, ಈಗ ಬೇರೆ ತರ ಒಳಿತೇ ಆಗೋ ಹಂಗೆ ಹಿರಿಯರು ನೋಡಿಕೊಳ್ಳಬೇಕು."

"ಅದಕಂತಲೇ ಬಂದೆ ಅಮ್ಮಾಜಿ. ದೊಡ್ಡ ರಾಜರು ಕೊಟ್ಟ ಪಡೀನ ಒಡೆಯರು ನಿಲ್ಲಿಸಿದರು ಅಂದರು. ಬೇಡ ದಣಿ, ಊರು ಕೆರಳತದೆ, ಅಂತ ಹೇಳಾಕಂತ ಬಂದೆ."



“ಯಾರು ಮಾಡಿದ ಮಾತೋ ಅದು, ಒಡೆಯರು ಮಾಡಿದ್ದು ಅಂತ ತಿಳಿಯಬೇಡಿ ಅಜ್ಜ. ಪಡೀ ನಡೀತದೆ. ದೊಡ್ಡವರು ಮಾಡಿದ್ದನ್ನು ಮಕ್ಕಳು ನಿಲ್ಲಿಸತಾರೆಯೇ? ಅರಸರೇ ಹೇಳಿದ್ದರೂ ನಿಜಕ್ಕೆ ಹೇಳಿದ ಮಾತಲ್ಲ ಸುಮ್ಮನೆ ಹೇಳಿದ ಮಾತು, ಅಂತ ತಿಳೀರಿ.”

“ಒಳ್ಳೇ ಮಾತಮ್ಮಾಜಿ. ದೊರೆ ಮನೇಲಿ ಈಗ ನಮ್ಮ ಬೆಸಗೊಂಬೋರಿಲ್ಲ ಅಂತ ಬಂದರೆ ಇದೀವಿ ಅಂತಿದೀರಿ ರಾಣಿ. ನೀವು ಹೇಳಿದ ಹಂಗಾಗಲಿ.”

ಇವನು ಈ ಮಾತನ್ನಾಡುತ್ತಿರುವಲ್ಲಿ ರಾಣಿ ಮಗಳಿಗೆ  ಕಿವಿಯಲ್ಲಿ “ಅಜ್ಜಾ ಅವರಿಗೆ ಬಟ್ಟಲಲ್ಲಿ ಹಾಲು ತಂದು ಕೊಡು.” ಎಂದಳು. ರಾಜಕುಮಾರಿ ಒಳಗೆ ಹೋಗಿ ತಾನೆ ಒಂದು ತಟ್ಟೆಯಲ್ಲಿ ಹಾಲಿನ ಬಟ್ಟಲನ್ನು ಇಟ್ಟುಕೊಂಡು ತಂದಳು. ಅವಳ ಹಿಂದೆ ಸೇವಕಿ ಎಲೆ, ಅಡಿಕೆ, ದ್ರಾಕ್ಷಿ, ಖರ್ಜೂರ,  ಗಂಧ ಇಟ್ಟಿದ್ದ ತಾಂಬಾಳವೊಂದನ್ನು ಹೊತ್ತು ತಂದಳು.

ರಾಜಕುಮಾರಿ ನೀಡಿದ ಬಟ್ಟಲನ್ನು ತೆಗೆದುಕೊಂಡು ತಕ್ಕ, “ಒಂದು ಕೊಪ್ಪೀಲಿ ಎರಡು ಎಣ್ಣೀ ಉಂಟೇ? ತಾಯಿ ಎಂತು, ಮಗಳು ಅಂತು, ತಾತನ ಗೆಳೆಯನ್ನ ಸಾಕಿಕೋ, ತಾಯಿ,” ಎಂದನು. ಹಾಲನ್ನು ಕುಡಿದು ಬಟ್ಟಲನ್ನು ಮರಳಿ ತಟ್ಟೆಯಲ್ಲಿಟ್ಟನು.

ಆಮೇಲೆ ಸೇವಕಿ ತಂದ ತಟ್ಟೆಯಿಂದ ಕೈತುಂಬ ಎಲೆ, ಅಡಕೆ, ದ್ರಾಕ್ಷಿ, ಖರ್ಜೂರವನ್ನು ತೆಗೆದುಕೊಂಡು “ನಾನಿನ್ನು ಬರತೇನೆ ಅಮ್ಮಾಜಿ,” ಎಂದು ಅವನು ಎದ್ದನು. ರಾಣಿ, “ಹಿರಿಯರು ಹೋಗಿ, ನೀವು ಹಿರಿಯರ ತಾವಲ್ಲಿ ಇದ್ದೀರಿ. ಮಕ್ಕಳು ನಿಮ್ಮವರೂ ಅಂತ ಹಿರಿಯರಾಗಿ ನೋಡಿಕೊಳ್ಳಿ, ಹೋಗಿಬನ್ನಿ, ಅಜ್ಜ,” ಎಂದಳು. ಕೈಮುಗಿದಳು. ರಾಜಕುಮಾರಿಯೂ ಕೈಮುಗಿದಳು. ಅವಳು ತನ್ನ ಮುಖದ ಕಡೆ ದೃಷ್ಟಿಸಿ ನೋಡುತ್ತಿದ್ದುದು ಮುದುಕನಿಗೆ ಈ

ಮೊದಲೇ ಕಂಡಿತ್ತು. ಈಗ ಮರಳಿ ಕಂಡಿತು. ಅವಳು ಹಾಗೆ ನೋಡುತ್ತಿರುವುದು ತನ್ನ ಮೀಸೆಯನ್ನು ಎಂದು ಅವನು ತಿಳಿದುಕೊಂಡನು.

"ಹುಲಿ ಕೊಂದು ಬೆಳೆಸಿದ್ದು ತಂಗ್ಯವ್ವ, ಈಗಿನವರ ಹಾಗೆ ಸುಳ್ಳು ಸುಳ್ಳೇ ಅಲ್ಲ", ಎಂದು ಹೇಳಿ ನಕ್ಕನು. ರಾಜಕುಮಾರಿಯೂ ನಕ್ಕಳು. ಮುದುಕನ ಹೆಮ್ಮೆಯನ್ನು ನೋಡಿ ರಾಣಿಗೂ ನಗೆ ಬಂದಿತು.

ಉತ್ತಯ್ಯತಕ್ಕ ರಾಣಿಗೆ ಕೈಮುಗಿದು ಸಜ್ಜೆಯಿಂದ ಹೊರಕ್ಕೆ ಬಂದನು.

ಉತ್ತಯ್ಯತಕ್ಕ ಕೋಣೆಯನ್ನು ಬಿಟ್ಟ ಸ್ವಲ್ಪ ಹೊತ್ತಿನಲ್ಲಿ ಅರಸ, "ಲೋ ಬಸವ ಅಲ್ಲಿದೀಯೇನೋ?"ಎಂದು ಕರೆದನು.

ಬಸವ ಅಲ್ಲೇ ಇದ್ದವನು; "ಇದ್ದೀನಿ ಒಡೆಯರೆ," ಎಂದನು

ಅರಸ : "ಕೇಳಿದ್ಯಾ ಮುದಿಯ ಆಡಿದ ಮಾತ?"

ಬಸವ : "ಅಪ್ಪಾಜಿಯವರ ಗೆಳೆಯ ಅಂತ ಅವರದು ಆಸು ಪೆಡಸರ ಒಡೆಯರೆ,"

ಅರಸ : "ಅಂದರೂ ಇವ ಮಾತಾಡತಿದ್ದರೆ ಅಪ್ಪಾಜಿಯವರೇ ಇದಿರಿಗಿರೋ ಹಂಗಾಯಿತು ನನಗೆ."

ಬಸವ : ಆಗೋದೆ ಒಡೆಯರೆ."

ಅರಸ : "ಇವನಿಂದಾಗೋದು ಏನೂ ಇಲ್ಲ. ಅಂದರೂ ಅಪ್ಪಾಜಿಯವರಿಗೆ ಬೇಕಾಗಿದ್ದವನು. ಇವನ ಜೊತೆ ಜಗಳ ಬೇಡ ಕಾಣೋ."

ಬಸವ : "ಆಯಿತು ಒಡೆಯರೆ."

ಅರಸ : "ಪಡೀನ ತಿರುಗಿ ಕೊಟ್ಟಿದ್ದೀವಿ ಅನ್ನು"

ಬಸವ : "ಆಯಿತು ಒಡೆಯರೆ." "ಹಂಗಾದರೆ ತಕ್ಕನಿಗೆ ಈ ಮಾತು ಈಗಲೇ ತಿಳಿಸತೀನಿ ಒಡೆಯರೆ," ಅಂದನು.

ಅರಸ : "ತಿಳಿಸು" ಎಂದನು.

ತಕ್ಕ ರಾಣಿಯಿಂದ ಅಪ್ಪಣೆ ಪಡೆದು ಹೊರಕ್ಕೆ ಬಂದಾಗ ಬಸವ ಬಾಗಿಲಲ್ಲಿ ಅವನನ್ನು ಕಂಡು, "ಅರಸರು ನಿಮ್ಮ ಪಡೀ ನಿಮಗಿರಲಿ ಅಂದರು, ತಕ್ಕರೆ," ಎಂದನು.

ತಕ್ಕನಿಗೆ ತುಂಬ ಸಂತೋಷವಾಯಿತು. ಅವನು "ಹಂಗಂದರಾ? ಒಳ್ಳಿತು ಬಸವಯ್ಯ, ಕೈಮುಗಿದೆ ಅನ್ನು,"ಎಂದನು.

ತಕ್ಕನಿಗೆ ಹೇಳಿದ ಮಾತು ರಾಣಿಯ ಕಿವಿಗೂ ಬಿದ್ದಿತು; ಅವಳಿಗೂ ಸಮಾಧಾನವಾಯಿತು.

* * *

## ಲೇಖಕರ ಪರಿಚಯ



‘ಕನ್ನಡದ ಸಣ್ಣಕತೆಗಳ ಜನಕ’, ‘ಕನ್ನಡದ ಆಸ್ತಿ’ ಎಂದೇ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆ, ಮಾಲೂರು ತಾಲೂಕಿನ ಮಾಸ್ತಿ ಗ್ರಾಮದಲ್ಲಿ ೧೮೯೧ ಜೂನ್ ೬ ರಂದು ಜನಿಸಿದರು. ತಂದೆ ರಾಮಸ್ವಾಮಿ ಅಯ್ಯಂಗಾರ್, ತಾಯಿ ತಿರುಮಲಮ್ಮ. ಇವರು ಯಳಂದೂರು, ಶಿವಾರಪಟ್ಟಣ, ಮಳವಳ್ಳಿ, ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಬೆಂಗಳೂರು ಸೆಂಟ್ರಲ್ ಕಾಲೇಜಿನಿಂದ ಕಲಾ ಶಿಕ್ಷಣದಲ್ಲಿ ಪದವಿಯನ್ನು ಪಡೆದರು. ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಇಂಗ್ಲಿಷ್ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಪ್ರಾಧ್ಯಾಪಕರಾದರು. ಮೈಸೂರು ಸಂಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಲವು ಜವಾಬ್ದಾರಿಯುತ ಹುದ್ದೆಗಳನ್ನು ಅಲಂಕರಿಸಿದರು. ೧೯೨೯ರಲ್ಲಿ ಬೆಳಗಾವಿಯಲ್ಲಿ ನಡೆದ ೧೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೩೦ ರಲ್ಲಿ ಜಿಲ್ಲಾಧಿಕಾರಿ ಹುದ್ದೆಗೆ ಏರಿದರು. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್ ಪದವಿ ಪಡೆದರು. ಉತ್ತಮ ಕಾದಂಬರಿಕಾರರೂ ಕವಿಗಳೂ ಆದ ಇವರು ‘ಶ್ರೀನಿವಾಸ’ ಎಂಬ ಕಾವ್ಯನಾಮದಿಂದ ಪ್ರಸಿದ್ಧರು. ಸಣ್ಣಕತೆಗಳ ಸಂಪುಟಗಳು, ಚೆಲುವು, ಮಲಾರ, ಗೌಡರ ಮಲ್ಲಿ, ನವರಾತ್ರಿ, ಚೆನ್ನಬಸವ ನಾಯಕ, ಚಿಕವೀರರಾಜೇಂದ್ರ, ತಾಳಿಕೋಟೆ, ಕಾಕನಕೋಟೆ , ತಿರುಪಾಣಿ, ಅನಾರ್ಕಲಿ ಮುಂತಾದವು ಇವರ ಪ್ರಸಿದ್ಧ ಕೃತಿಗಳಾಗಿವೆ. ಇವರ ‘ಚಿಕವೀರರಾಜೇಂದ್ರ’ ಎಂಬ ಐತಿಹಾಸಿಕ ಕಾದಂಬರಿಗೆ ೧೯೮೩ ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆತಿದೆ. ಇವರು ೧೯೮೬ರಲ್ಲಿ ನಿಧನರಾದರು.

ಪ್ರಸ್ತುತ ಪಾಠವನ್ನು ಇವರ ‘ಚಿಕವೀರರಾಜೇಂದ್ರ’ ಎಂಬ ಐತಿಹಾಸಿಕ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.

## ವಿಶದೀಕರಣ

**ಉದ್ದಿನಿ -** ೧೬೩೩ – ೧೮೩೪ ರ ಅವಧಿಯಲ್ಲಿ ಕೊಡಗನ್ನು ಆಳಿದ ರಾಜಮನೆತನವೇ ಹಾಲೇರಿ ಮನೆತನ. ಇವರ ಪ್ರಮುಖ ರಾಜಧಾನಿ ಮಡಿಕೇರಿ. ಇಕ್ಕೇರಿಯ ರಾಜಕುಮಾರನಾಗಿದ್ದ ವೀರರಾಜ ಎಂಬವನು ೧೭ನೇ ಶತಮಾನದಲ್ಲಿ ಜಂಗಮ ವೇಷದಲ್ಲಿ ಹಾಲೇರಿಗೆ ಬಂದು ನೆಲೆಸಿ ಈ ವಂಶದ ಮೂಲಪುರುಷನಾದನು. ದಂಡು ಕಟ್ಟಿ ಸುತ್ತಮುತ್ತಲಿನ ಪಾಳೆಯಗಾರರನ್ನು ಸೋಲಿಸಿ ಅವರ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡನು. ಜಂಗಮ ವೇಷದಲ್ಲಿ ಬಂದ ಈತನನ್ನೆ ಲೇಖಕರು ಉದ್ದಿನಿ ಎಂದಿರುವರು.

**ಪಾಣೇ ಸೂರ್ಯನಾರಾಯಣ -** ಮಡಿಕೇರಿ ಅರಮನೆಯವರಿಂದ ತನಗಾದ ತೊಂದರೆಯನ್ನು ಮಂತ್ರಿಯಲ್ಲಿ ನಿವೇದಿಸಲು ಬಂದ ಓರ್ವ ಪ್ರಜೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಬೋಪಣ್ಣನು ಲಕ್ಷ್ಮೀನಾರಾಯಣಯ್ಯನವರೊಡನೆ ಚರ್ಚಿಸಿದ ವಿಷಯವೇನು?

೨. ಉತ್ತಯ್ಯತಕ್ಕನು ಅರಸನ ಬಳಿ ಬಂದು ಏನೆಂದು ಬೇಡಿಕೊಂಡನು?

೩. ಅರಮನೆಗೆ ಬಂದ ಉತ್ತಯ್ಯ ತಕ್ಕನನ್ನು ರಾಣಿ ಹೇಗೆ ಬರಮಾಡಿಕೊಂಡಳು?

೪. 'ಪಡಿ'ಯನ್ನು ನಿಲ್ಲಿಸಿದ ಬಗ್ಗೆ ರಾಣಿಯ ಅಭಿಪ್ರಾಯವೇನು?

## ಪಾತ್ರಚಿತ್ರಣ ಮಾಡಿರಿ

'ಪಡಿ' ಪಾಠದಲ್ಲಿ ನಿಮಗೆ ಇಷ್ಟವಾದ ಪಾತ್ರವೊಂದರ ಪಾತ್ರ ಚಿತ್ರಣ ಮಾಡಿರಿ.

## ಟಿಪ್ಪಣಿ ಬರೆಯಿರಿ

'ಅತಿಥಿ ದೇವೋಭವ' ಎಂಬುದು ನಮ್ಮ ಸಂಸ್ಕೃತಿ. ಅರಮನೆಗೆ ಬಂದ ಉತ್ತಯ್ಯತಕ್ಕನನ್ನು ರಾಣಿ ಸತ್ಕರಿಸಿದ ಬಗೆ ಹೇಗೆ? ನಿಮ್ಮ ಅಭಿಪ್ರಾಯದೊಂದಿಗೆ ಟಿಪ್ಪಣಿ ಬರೆಯಿರಿ.

## ಶೀರ್ಷಿಕೆಯ ಔಚಿತ್ಯವನ್ನು ಬರೆಯಿರಿ

'ಪಡಿ' ಪಾಠದ ಶೀರ್ಷಿಕೆಯ ಔಚಿತ್ಯವನ್ನು ಸಮರ್ಥಿಸಿ ಬರೆಯಿರಿ.

## ಹೋಲಿಕೆಯ ಟಿಪ್ಪಣಿ ಬರೆಯಿರಿ

'ಪಡಿ' ಪಾಠದ ಆಧಾರದಲ್ಲಿ ವೃದ್ಧರ ಕುರಿತು ದೊರೆ ಮತ್ತು ರಾಣಿಯ ಧೋರಣೆಗಳನ್ನು ಹೋಲಿಸಿ ಟಿಪ್ಪಣಿ ಬರೆಯಿರಿ.

## ಸಂದೇಶ ಬರೆಯಿರಿ

''ಪಡಿ' ಪಾಠವು ನೀಡುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಓದುಗರ ಓಲೆ ಬರೆಯಿರಿ

ವೃದ್ಧರು ಅನುಭವದ ಗಣಿಗಳು. ಅವರ ಜೀವನಾನುಭವಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕಾದುದು ನಮ್ಮ ಜವಾಬ್ದಾರಿಯಾಗಿದೆ. ಆದರೆ ಇಂದಿನ ಆಧುನಿಕ ಬದುಕಿನ ಜಂಜಾಟದಲ್ಲಿ ಅವರು ಕಡೆಗಣನೆಗೆ ಒಳಗಾಗುತ್ತಿರುವುದು ಕಂಡು ಬರುತ್ತಿದೆ. ಅವರಿಗೂ ಭಾವನೆಗಳಿವೆ, ಅವರ ಬಗ್ಗೆ ಕಾಳಜಿ, ಆರೈಕೆ, ಉಪಚಾರ ನಮ್ಮ ಕರ್ತವ್ಯವಾಗಿದೆ. ಈ ವಿಚಾರಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಪತ್ರಿಕೆಯ ಓದುಗರ ಓಲೆ ವಿಭಾಗಕ್ಕೆ ಕಳುಹಿಸುವುದಕ್ಕಾಗಿ ಒಂದು ಕಿರುಲೇಖನವನ್ನು ಬರೆಯಿರಿ.

## ಅಭಿನಯಿಸಿರಿ

ಪಾಠದಲ್ಲಿ ಬರುವ ಉತ್ತಯ್ಯತಕ್ಕ ಮತ್ತು ರಾಣಿಯ ನಡುವೆ ನಡೆದ ಸಂಭಾಷಣೆಯನ್ನು ನಾಟಕ ರೂಪದಲ್ಲಿ ಬರೆದು ಅಭಿನಯಿಸಿರಿ.

# ಪಿಡಿಯೆಂ ಪುರಿಗಣೆಯಂ

ಪಂಪ

**ಕಥಾ ಸಂದರ್ಭ**

(ಕೌರವರು ಮತ್ತು ಪಾಂಡವರ ಮಧ್ಯೆ ಸಂಧಿ ನಡೆಸಲು ಕೃಷ್ಣನು ದುರ್ಯೋಧನನ ಅರಮನೆಗೆ ಬರುತ್ತಾನೆ. ಕೃಷ್ಣನ ಸಂಧಿಯ ಮಾತುಗಳಿಗೆ ದುರ್ಯೋಧನನು ಒಡಂಬಡದಿದ್ದಾಗ ಅಲ್ಲಿಂದ ಹೊರಟು ಕೃಷ್ಣನು ಕರ್ಣನ ಮನೆಗೆ ಬರುತ್ತಾನೆ. ಕರ್ಣನನ್ನು ತನ್ನ ರಥದಲ್ಲಿಯೇ ಜೊತೆಗೆ ಕುಳ್ಳಿರಿಸಿ 'ಸ್ವಲ್ಪ ದೂರ ನನ್ನನ್ನು ಕಳುಹಿಸಿಕೊಟ್ಟು ಬಾ' ಎಂದು ಕರೆದುಕೊಂಡು ಹೋಗಿ ಒಂದೆಡೆ ನಿಂತು ಕರ್ಣನಿಗೆ ಆತನ ಜನ್ಮರಹಸ್ಯವನ್ನು ತಿಳಿಸುತ್ತಾನೆ. ಆ ಮೂಲಕ ಕರ್ಣನನ್ನು ಪಾಂಡವರ ಕಡೆಗೆ ಸೆಳೆಯಲು ಪ್ರಯತ್ನಿಸುತ್ತಾನೆ. ಆದರೆ ಕರ್ಣನು ಸ್ವಾಮಿದ್ರೋಹ ಮಾಡಲೊಲ್ಲದೆ ತನ್ನ ನಯವಾದ ಮಾತುಗಳಲ್ಲಿ ಕೃಷ್ಣನ ಅಪೇಕ್ಷೆಯನ್ನು ತಿರಸ್ಕರಿಸುತ್ತಾನೆ. ಕರ್ಣನು ಪಾಂಡವರ ಕಡೆಗೆ ಸೇರಿಕೊಳ್ಳುವುದಿಲ್ಲ ಎಂಬುದನ್ನು ಅರಿತ ಕೃಷ್ಣನು ಕರ್ಣನನ್ನು ಬೀಳ್ಕೊಟ್ಟು ಹಿಂತಿರುಗುತ್ತಾನೆ.

ಭಾನುವಾರದಂದು ಗಂಗಾ ನದಿಗೆ ಸ್ನಾನಕ್ಕೆಂದು ಬಂದ ಕರ್ಣನು ದುರ್ಯೋಧನನು ಕಳುಹಿಸಿಕೊಟ್ಟ ರಾಶಿ ರಾಶಿ ಹೊನ್ನನ್ನು ಪಾರ್ವರಿಗೆ ದಾನವಾಗಿ ಕೊಡುತ್ತಾನೆ. ಗಂಗಾ ನದಿಯಲ್ಲಿ ಸ್ನಾನ ಮಾಡಿ ಸೂರ್ಯನಿಗೆ ಅರ್ಘ್ಯವನ್ನು ಕೊಡುತ್ತಿರುವಾಗ ಶ್ರೀಕೃಷ್ಣನ ಸೂಚನೆಯಂತೆ ಕುಂತಿಯು ಅಲ್ಲಿಗೆ ಬಂದು ಕರ್ಣನನ್ನು ಕಾಣುತ್ತಾಳೆ)



ವ||  ಅಂತು ಚಾಗಂಗೆಯ್ದು ಜಗನ್ಮಂಗಳ ಗಂಗಾವಾರಿಯೊಳನಿವಾರಿತ ಪರಾಕ್ರಮನಘಮರ್ಷಣಪೂರ್ವಕಂ ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದಾದಿತ್ಯತೇಜನಾದಿತ್ಯಂಗರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂಗೆಯ್ವಾಗಳ್ –

ಕಂ|| ಸಂಗತ ತರಂಗಯುತೆಯಂ |
ಮಂಗಳ ಲಕ್ಷಣೆಯನಂದು ಭೋಂಕನೆ ಕಂಡಂ ||
ಗಂಗಾಂಗನೆಯಂ ಕಾಣ್ಬವೋ |
ಲಂಗನೃಪಂ ಮುಂದೆ ನಿಂದ ಕೊಂತಿಯನಾಗಳ್ ||

ವ|| ಅಂತು ಕಂಡು ಮನದೊಳಾದೆಱಕದಿಂ ಸಾಷ್ಟಾಂಗಮೆಱಗಿ ಪೊಡೆವಟ್ಟ ನಿಜ ನಂದನನನಱ್ಕಱಿಂದಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿ –

ಕಂ|| ಆಗಳೆ ಮಗನಂ ಪೆತ್ತವೋ |
ಲಾಗಿ ಲತಾಲಲಿತೆ ನೊಸಲ ಕಣ್ಬೆತ್ತವೊಲಂ ||
ತಾಗಡೆ ರಾಗಕ್ಕಾಗರ |
ಮಾಗೆ ದಿನಾಧಿಪ ತನೂಜನೊಸೆದಿರ್ಪಿನೆಗಂ ||

ವ|| ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು-

ಕಂ|| ಒಪ್ಪಿಸಿದೆಂ ಕೆಯ್ಯೆಡೆಯೆಂ |
ದಪ್ಪೈಸಿದ ನಿನ್ನ ಮಗನನೀಗಳೆ ನಿನಗೆಂ ||
ದಪ್ಪೈಸಿ ಗಂಗೆ ಪೋಪುದು |
ಮೊಪ್ಪುವ ನಿಜ ಬಿಂಬದೊಳಗಣಿಂದಂ ದಿನಪಂ ||

ಪೊಱಮಟ್ಟು ಬರಲ್ ತನ್ನಡಿ |
ಗೆಱಗಿದ ನಿಜಸುತನನಕ್ಕಿಱಿಂ ಪರಸಿ ಮನಂ ||
ಮಱುಗಿ ರವಿ ನುಡಿದನೆನ್ನುಮ |
ನುಱದೆ ಮರುಳ್ಮಗನೆ ಹರಿಗೆ ಕವಚಮನಿತ್ತೈ ||

ನುಡಿಯೆನಿದಂ ನಿನ್ನಂಬಿಕೆ |
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ ||
ಲ್ಕೊಡರಿಸಿ ಬಂದಳ್ ಸುತರಂ |
ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ ||

ಎಂದರವಿಂದ ಪ್ರಿಯ ಸಖ |
ನಂದಂಬರತಳಮನಡರ್ವುದುಂ ಕೆಯ್ಮುಗಿದಿಂ ||
ತೆಂದಂ ಕುಂತಿಯನಬ್ಬೇಂ |
ವಂದಿರ್ಪುದದೆನಗೆ ಸಯ್ಪು ಬರ್ಪಂತೀಗಳ್ ||

ಚಲಮುಂ ಚಾಗಮುಮಳವುಂ |
ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್ ||
ನೆಲಸಿದವು ನಿಮ್ಮ ಕರುಣಾ |
ಬಲದಿಂ ನೀವೆನ್ನನಿಂದು ಮಗನೆಂದುದಱಿಂ ||

ಪಡೆದರ್ ತಾಯುಂ ತಂದೆಯು |
ಮೊಡಲಂ ಪ್ರಾಣಮುಮನವರವವು ಕೆಯ್ಯೆಡೆಯಂ ||
ಕುಡುವುದರಿದಾಯ್ತೆ ನೀಮೆನ |
ಗೆಡೆ ಮಡಗದೆ ಬೆಸಪ ತೊೞ್ತುವೆಸನಂ ಬೆಸಸಿಂ ||

ಎಂಬುದುಮಂಬಿಕೆ ಮಗನೆ ಮ |
ನಂಬೆಳಱದೆ ನೀನುಮಿತ್ತೆಯಾನುಂ ಪೆತ್ತೆಂ ||
ನಂಬಿದ ನಿನ್ನನುಜರ್ ನಿ |
ನ್ನಂ ಬೆಸಕೆಯೆ ನೀನೆ ನೆಲನನಾಳ್ವುದು ಕಂದಾ ||

ನಿನಗಪ್ಪರಸಂ ದುರ್ಯೋ |
ಧನನೊಲವಂ ಮುಂದುಗೆಯ್ದು ಬೆಸಕೆಯ್ವರೆ ನಿ ||
ನ್ನನುಜರೆರಱ್ದೆಸೆಗಂ ಕಿಸು |
ಱನಿಸಾಗದು ಮಗನೆ ನೀನೊಡಂಬಡವೇೞ್ಕುಂ ||

ವ|| ಎಂಬುದುಮದೆಲ್ಲಮಂ ಕೇಳ್ದು ಕರ್ಣಂ ಮುಗುಳ್ನಗೆ ನಕ್ಕು –

ಮ|| ಭಯಮಂ ಲೋಭಮುಮೆಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾ |
ಱಿಯನೊಕ್ಕಾಳ್ದನ ಗೆಯ್ದ ಸತ್ಕೃತಮುಮಂ ಪಿಂತಿಕ್ಕಿ ಜೋಳಕ್ಕೆ ತ ||
ಪ್ಪಿಯುಮಿಂ ಬಾೞ್ವದೆ ಪೂಣ್ದು ನಿಲ್ಲದಿಕೆಯಂ ಬಾೞ್ವಿಂತು ವಿಖ್ಯಾತ ಕೀ |
ರ್ತಿಯವೋಲೀಯೊಡಲಬ್ಬೆ ಪೇೞಿಮೆನಗೇಂ ಕಲ್ಪಾಂತರಸ್ಥಾಯಿಯೇ ||

ಕಂ|| ಮೀಂಗುಲಿಗನೆನಾಗಿಯುಮಣ |
ಮಾಂ ಗುಣಮನೆ ಬಿಸುಟೆನಿಲ್ಲ ನಿಮಗಂ ಮಗನಾ ||
ದಂಗೆನಗೆ ಬಿಸುಡಲಕ್ಕುಮೆ |
ನೀಂ ಗಳ ಪಂಬಲನೆ ಬಿಸುಡಿಮಿನ್ನೆನ್ನೆಡೆಯೊಳ್ ||

ವ|| ಎಂಬುದುಂ ಕೊಂತಿ ಭೋಂಕನೆರ್ದೆದೆಱೆದು-

ಮ|| ಅಱೆದೆಂ ನೆಟ್ಟನೆ ಬೆಟ್ಟನಿಂತು ನುಡಿವೈ ನೀಂ ಕಂದ ಪೋಗಿಂದೆ ಕ |
ಟ್ಟಱೆದತ್ತಾಗದೆ ಸೋಮವಂಶಮೆನಗಿಂ ಬಾೞ್ವಾಸೆಯೆಲ್ಲಿತ್ತೋ ಬಿ ||
ಟ್ಟುಱೆದೆಂ ಮತ್ತಿನ ಮಕ್ಕಳಾಸೆಯುಮನಾನೆಂದಳ್ಗೆ ಶೋಕಾಗ್ನಿ ಪೊಂ |
ಪುಱೆವೋಗುತ್ತಿರೆ ಕರ್ಣನೆಂದನಿನಿತೇಂ ಪೇಱಬ್ಬೆ ಚಿಂತಾಂತರಂ ||

ಕಂ||   ಪಿಡಿಯೆಂ ಪುರಿಗಣೆಯಂ ನರ |
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ ||
ದೊರ್ಡಮೞಿಯೆಂ ಪೆರ್ಜಸಮನೆ |
ಪಿಡಿದೆನ್ನನೆ ರಣದೊಳೞಿವೆನಿರದಡಿಯೆತ್ತಿಂ ||

ವ||   ಎಂದು ಕೊಂತಿಯಂ ವಿಸರ್ಜಿಸಿ ಚಲದ ಚಾಗದ ಕುಲದ ನನ್ನಿಯನಾವರ್ಜಿಸಿ
ರಾಧೇಯನೊಳ್ಪಿಂಗಾಧೇಯಮಾಗಿರ್ದನ್

## ಕವಿ ಪರಿಚಯ



ಪಂಪನು ಕನ್ನಡದ ಆದಿಕವಿ. ಅವನು ಜನಿಸಿದ್ದು ಕ್ರಿ.ಶ ೯೦೨ ರಲ್ಲಿ. ಧಾರಾವಾಡದ ಅಣ್ಣಿಗೇರಿ ಪಂಪನ ಜನ್ಮಸ್ಥಳ. ಈತನ ತಂದೆ ಭೀಮಪಯ್ಯ; ತಾಯಿ ಅಬ್ಬಣಬ್ಬೆ. ಪಂಪನು ಚಾಲುಕ್ಯ ದೊರೆ ೨ನೇ ಅರಿಕೇಸರಿಯ ಆಶ್ರಯದಲ್ಲಿದ್ದನು. 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಇವನ ಎರಡು ಪ್ರಸಿದ್ಧ ಕೃತಿಗಳು. ಮಹಾಭಾರತದ ಕಥೆಯು ವಸ್ತುವಾಗಿರುವ ವಿಕ್ರಮಾರ್ಜುನ ವಿಜಯವು 'ಪಂಪ ಭಾರತ' ಎಂದೇ ಪ್ರಸಿದ್ಧವಾಗಿದೆ. ಇದರಲ್ಲಿ ಕವಿ ಪಂಪನು ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಕಥಾನಾಯಕನಾದ ಅರ್ಜುನನಿಗೆ ಸಮೀಕರಿಸಿರುತ್ತಾನೆ. 'ಕವಿತಾಗುಣಾರ್ಣವ', 'ಸರಸ್ವತೀ ಮಣಿಹಾರ', 'ಸಂಸಾರ ಸಾರೋದಯ' ಎಂಬಿವು ಈತನ ಬಿರುದುಗಳು. ಪಂಪಪೂರ್ವದಲ್ಲಿ ಕನ್ನಡದಲ್ಲಿ ರಚಿತವಾದ ಯಾವುದೊಂದು ಕಾವ್ಯಕೃತಿಯೂ ಪೂರ್ಣವಾಗಿ ಲಭ್ಯವಾಗದಿರುವುದರಿಂದ ಪಂಪನು 'ಕನ್ನಡದ ಆದಿ ಕವಿ' ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂಬ ಹೊಗಳಿಕೆಗೆ ಪಾತ್ರನಾದ ಕವಿ ಈತ.

ಪ್ರಸ್ತುತ ಕಾವ್ಯಭಾಗವನ್ನು 'ವಿಕ್ರಮಾರ್ಜುನ ವಿಜಯ' ಎಂಬ ಚಂಪೂಕಾವ್ಯದ ನವಮಾಶ್ವಾಸದಿಂದ ಆರಿಸಲಾಗಿದೆ.

## ಪದ ವಿಂಗಡಣೆ

ಕೆಳಗೆ ಕೊಡಲಾದ ಪದ ವಿಂಗಡಣೆಗಳನ್ನು ಗಮನಿಸಿರಿ.

- ಜಗನ್ಮಂಗಳ

  ಜಗತ್ + ಮಂಗಳ

- ಪರಾಕ್ರಮನಘಮರ್ಷಣಪೂರ್ವಕಂ

  ಪರಾಕ್ರಮನ್ + ಅಘಮರ್ಷಣಪೂರ್ವಕಂ

- ಕನಕಕಮಳಂಗಳಿಂದಾದಿತ್ಯತೇಜನಾದಿತ್ಯಂಗರ್ಘ್ಯಮೆತ್ತಿ

  ಕನಕಕಮಳಂಗಳಿಂದೆ + ಆದಿತ್ಯತೇಜನ್ + ಆದಿತ್ಯಂಗೆ + ಅರ್ಘ್ಯಂ + ಎತ್ತಿ

- ಗಂಗಾಂಗನೆಯಂ

  ಗಂಗಾ + ಅಂಗನೆಯಂ

- ಮನದೊಳಾದೆರಕದಿಂ

  ಮನದೊಳ್ + ಆದ + ಎರಕದಿಂ

- ನಿಜನಂದನನನಟ್ಟುಂದಪ್ಪಿಕೊಂಡು

  ನಿಜನಂದನನನ್ + ಅಟ್ಟುಂದೆ+ ಅಪ್ಪಿಕೊಂಡು

- ತನೂಜನೊಸೆದಿರ್ಪಿನೆಗಂ

  ತನೂಜನ್ + ಒಸೆದು + ಇರ್ಪಿನೆಗಂ

- ಕೆಯ್ಯೆಡೆಯೆಂದಪ್ಪೈಸಿದ

  ಕೆಯ್ + ಎಡೆ + ಎಂದು + ಅಪ್ಪೈಸಿದ

- ಬಿಂಬದೊಳಗಣಿಂದಂ

  ಬಿಂಬದ + ಒಳಗಣಿಂದಂ

- ನುಡಿದನೆನ್ನುಮನುಱದೆ

  ನುಡಿದನ್ + ಎನ್ನುಮನ್ + ಉಱದೆ

- ಪುರಿಗಣೆಯನೆನಿತು

  ಪುರಿಗಣೆಯನ್ + ಎನಿತು

- ಅರವಿಂದಪ್ರಿಯಸಖನಂದಂಬರತಳಮನಡರ್ವುದುಂ

  ಅರವಿಂದಪ್ರಿಯಸಖನ್ + ಅಂದು + ಅಂಬರತಳಮನ್ + ಅಡರ್ವುದುಂ

- ಕುಂತಿಯನಬ್ಬೆಂವಂದಿರ್ಪುದದೆನಗೆ

  ಕುಂತಿಯನ್ + ಅಬ್ಬೆ + ಏಂ + ಬಂದು + ಇರ್ಪುದು + ಅದು + ಎನಗೆ

- ಪ್ರಾಣಮುಮನವರವವು

  ಪ್ರಾಣಮುಮನ್ + ಅವರವು + ಅವು

- ನೀನುಮಿತ್ತೆಯಾನುಂ

  ನೀನುಂ + ಇತ್ತೆ + ಆನುಂ

- ನಿನ್ನನುಜರೆರಱ್ದೆಸೆಗಂ

  ನಿನ್ನ + ಅನುಜರ್ + ಎರಱ್ + ದೆಸೆಗಂ

- ಕಿಸುಱಿನಿಸಾಗದು

  ಕಿಸುಱ್ + ಇನಿಸು + ಆಗದು

- ಕೀರ್ತಿಯವೋಲೀಯೊಡಲಬ್ಬೆ

  ಕೀರ್ತಿಯವೋಲ್ + ಈ + ಒಡಲ್ + ಅಬ್ಬೆ

- ಮೀಂಗುಲಿಗನೆನಾಗಿಯುಮಣಮಾಂ

  ಮೀಂಗುಲಿಗನೆನ್ + ಆಗಿಯುಂ + ಅಣಂ + ಆಂ

- ಮಕ್ಕಳಾಸೆಯುಮನಾನೆಂದಳ್ಗೆ

  ಮಕ್ಕಳ + ಆಸೆಯುಮನ್ + ಆನ್ + ಎಂದಳ್ಗೆ

- ನರನೆಡೆಗೊಂಡೊಡಮುಱಿದ

  ನರನ್ + ಎಡೆಗೊಂಡೊಡಂ + ಉಱಿದ

- ರಣದೊಳಱಿವೆನಿರದಡಿಯೆತ್ತಿಂ

  ರಣದೊಳ್ + ಅಱಿವೆನ್ + ಇರದೆ + ಅಡಿ + ಎತ್ತಿಂ

- ರಾಧೇಯನೊಳ್ಪಿಂಗಾಧೇಯಮಾಗಿರ್ದನ್

  ರಾಧೇಯನ್ + ಒಳ್ಪಿಂಗೆ + ಆಧೇಯಂ + ಆಗಿ + ಇರ್ದನ್

## ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ.

- ಪರಮಾಶೀರ್ವಚನಂಗಳಿಂ
- ರಾಗಕ್ಕಾಗರಮಾಗೆ
- ದಿನಾಧಿಪ
- ಮರುಳ್ಮಗನೆ
- ಕಾಯಲ್ಕೊಡರಿಸಿ
- ಬರ್ಪಂತೀಗಳ್
- ಚಾಗಮುಮಳವುಂ
- ಕುಲಮುಮೀಗಳೆನ್ನಯ
- ಕುಡುವುದರಿದಾಯ್ತೆ
- ತೊಟ್ಟುವೆಸನಂ
- ಎಂಬುದುಮಂಬಿಕೆ
- ಭೋಂಕನೆರ್ದೆದೆಱೆದು
- ನನ್ನಿಯನಾವರ್ಜಿಸಿ

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಸೂರ್ಯನು ಕರ್ಣನಲ್ಲಿ ಏನೆಂದು ಹೇಳಿದನು?

೨. ಕುಂತಿಯನ್ನು ನೋಡಿ ಸಂತೋಷಗೊಂಡು ಕರ್ಣನು ಏನೆಂದನು?

೩. ಕುಂತಿಯು ಕರ್ಣನಲ್ಲಿ ಏನನ್ನು ಕೇಳಿಕೊಂಡಳು?

೪. ಕರ್ಣನು ಕುಂತಿಗೆ ಏನೆಂದು ಮಾತು ಕೊಟ್ಟನು?

## ಸ್ವಾರಸ್ಯ ಬರೆಯಿರಿ

- ಮೀಂಗುಲಿಗನೆನಾಗಿಯುಮಣಮಾಂ ಗುಣಮನೆ ಬಿಸುಟೆನಿಲ್ಲ
- ಜೋಳಕ್ಕೆ ತಪ್ಪಿಯುಮಿಂ ಬಾಳ್ವುದೆ
- ಪೆರ್ಜಸಮನೆ ಪಿಡಿದು ರಣದೊಳಱಿವೆನ್

## ಹೊಸಗನ್ನಡದಲ್ಲಿ ಬರೆಯಿರಿ

ಕೆಳಗೆ ಕೊಡಲಾದ ಪದ್ಯದ ಸಾಲುಗಳನ್ನು ಹೊಸಗನ್ನಡದಲ್ಲಿ ಬರೆಯಿರಿ.

ಉದಾ : ನಿಜನಂದನನನಱ್ಕಱಿಂದಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿ

ತನ್ನ ಮಗನನ್ನು ಅಕ್ಕರೆಯಿಂದ ಅಪ್ಪಿಕೊಂಡು ಶ್ರೇಷ್ಠವಾದ ಆಶೀರ್ವಚನಗಳಿಂದ ಹರಸಿ

- ಪೊಱಮಟ್ಟು ಬರಲ್ ತನ್ನಡಿಗೆರಗಿದ ನಿಜಸುತನನಱ್ಕಱಿಂ ಪರಸಿ ಮನಂ ಮಱುಗಿ ರವಿ ನುಡಿದನ್
- ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ
- ಮಗನೆ ಮನಂಬೆಳಱದೆ ನೀನುಮಿತ್ತೆಯಾನುಂ ಪೆತ್ತೆಂ

## ಆಶಯ ಬರೆಯಿರಿ

'ಪಿಡಿಯೆಂ ಪುರಿಗಣೆಯಂ' ಕಾವ್ಯಭಾಗದ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

'ಪಿಡಿಯೆಂ ಪುರಿಗಣೆಯಂ' ಕಾವ್ಯಭಾಗದಲ್ಲಿ ಬರುವ ಕರ್ಣನ ವ್ಯಕ್ತಿತ್ವ ಮೇರುಸದೃಶವಾದುದು. ಕಾವ್ಯಭಾಗದಲ್ಲಿ ಬರುವ 'ರಾಧೇಯನೊಳ್ಪಿಂಗಾಧೇಯಮಾಗಿರ್ದನ್' ಎಂಬ ಮಾತು ಕರ್ಣನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಈ ಮಾತಿನ ಹಿನ್ನೆಲೆಯಲ್ಲಿ ಕಾವ್ಯಭಾಗದಲ್ಲಿ ಬರುವ ಕರ್ಣನ ಪಾತ್ರ ಚಿತ್ರಣ ಮಾಡಿರಿ.

## ಕಿರುಲೇಖನ ಬರೆಯಿರಿ

'ಪಿಡಿಯೆಂ ಪುರಿಗಣೆಯಂ' ಕಾವ್ಯಭಾಗದಲ್ಲಿ ಕುಂತಿಯು ಕರ್ಣನಲ್ಲಿ ಹೇಳಿದ ಮಾತುಗಳನ್ನು ವಿಶ್ಲೇಷಿಸಿ 'ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆಯು ನೆಲೆಸಲು ನಾವೇನು ಮಾಡಬಹುದು' ಎಂಬುದರ ಕುರಿತು ಕಿರುಲೇಖನವನ್ನು ಬರೆಯಿರಿ.

## ಅಲಂಕಾರ ತಿಳಿಯಿರಿ

ತಾಯಿಯನ್ನು ಕಂಡಾಗ ಮಗುವಿನ ಮುಖಕಮಲ ಅರಳಿತು

ಮೇಲೆ ನೀಡಿರುವ ವಾಕ್ಯದಲ್ಲಿ ಅಡಿಗೆರೆ ಎಳೆದ ಪದವನ್ನು ಗಮನಿಸಿರಿ.

ಮುಖ - ಉಪಮೇಯ

ಕಮಲ - ಉಪಮಾನ

ಇಲ್ಲಿ ಮುಖವು ಕಮಲದಂತೆ ಎಂದು ಹೇಳದೆ ಮುಖವೇ ಕಮಲ ಎನ್ನಲಾಗಿದೆ. ಉಪಮೇಯ ಮತ್ತು ಉಪಮಾನಗಳು ಬೇರೆ ಬೇರೆ ಎಂದು ಹೇಳದೆ ಅವೆರಡೂ ಒಂದೇ ಎನ್ನುವ ಅಭೇದ ಕಲ್ಪನೆ ಇಲ್ಲಿದೆ. ಇದನ್ನು ರೂಪಕಾಲಂಕಾರ ಎಂದು ಕರೆಯುತ್ತಾರೆ.

ರೂಪಕಾಲಂಕಾರಕ್ಕೆ ಬೇರೆ ಉದಾಹರಣೆಗಳು :

ಪಾದಪಂಕಜ

ಮುಖಾರವಿಂದ

ಕಾಲೇಕಂಬ

ದೇಹವೇದೇಗುಲ

## ಛಂದಸ್ಸನ್ನು ತಿಳಿಯಿರಿ

ಅಕ್ಷರಗಳ ( ವರ್ಣಗಳ) ಆಧಾರದಲ್ಲಿ ರಚಿಸಿದ ಗಣವನ್ನು ಅಕ್ಷರಗಣ (ವರ್ಣಗಣ) ಎನ್ನುತ್ತೇವೆ. ಮೂರು ಅಕ್ಷರಗಳ ಒಂದು ಗುಂಪು ಒಂದು ಅಕ್ಷರಗಣವೆನಿಸುತ್ತದೆ.

ಅಕ್ಷರ ಗಣದಲ್ಲಿ ಎಂಟು ವಿಧ.

| **ಅಕ್ಷರಗಳು** | **ಗಣಗಳು** | **ಮಾತ್ರಾವಿನ್ಯಾಸ** |
|---|---|---|
| ಯ ಮಾ ತಾ | ಯ - ಗಣ | U - - |
| ಮಾ ತಾ ರಾ | ಮ - ಗಣ | - - - |
| ತಾ ರಾ ಜ | ತ - ಗಣ | - - U |
| ರಾ ಜ ಭಾ | ರ - ಗಣ | - U - |
| ಜ ಭಾ ನ | ಜ - ಗಣ | U - U |
| ಭಾ ನ ಸ | ಭ - ಗಣ | - U U |
| ನ ಸ ಲ | ನ - ಗಣ | U U U |
| ಸ ಲ ಗಂ | ಸ - ಗಣ | U U - |

ಎಂಟು ವಿಧದ ಅಕ್ಷರಗಣಗಳನ್ನು ನೆನಪಿಡುವ ಸೂತ್ರ 'ಯಮಾತಾರಾಜಭಾನಸಲಗಂ'

ಅಕ್ಷರಗಣಗಳನ್ನು ಬಳಸಿಕೊಳ್ಳುವ ಛಂದೋರೂಪಗಳನ್ನು 'ವರ್ಣವೃತ್ತಗಳು' ಅಥವಾ 'ಅಕ್ಷರವೃತ್ತಗಳು' ಎನ್ನುತ್ತಾರೆ. ವರ್ಣವೃತ್ತಗಳಲ್ಲಿ ಉತ್ಪಲಮಾಲೆ, ಚಂಪಕಮಾಲೆ, ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ ಎಂಬ ವೃತ್ತಗಳನ್ನು 'ಖ್ಯಾತಕರ್ನಾಟಕಗಳು' ಎಂದು ಹೇಳುತ್ತಾರೆ. ಈ ವರ್ಣ ವೃತ್ತಗಳು ನಾಲ್ಕು ಪಾದಗಳಿಂದ ಕೂಡಿರುತ್ತವೆ.

ಇಲ್ಲಿ 'ಪಿಡಿಯೆಂ ಪುರಿಗಣೆಯಂ' ಕಾವ್ಯಭಾಗದಲ್ಲಿ ಬಂದಿರುವ ಮತ್ತೇಭವಿಕ್ರೀಡಿತ ವೃತ್ತದ ಲಕ್ಷಣವನ್ನು ವಿವರಿಸಲಾಗಿದೆ.

ಇದರ ಪಾದವೊಂದರಲ್ಲಿ ಅನುಕ್ರಮವಾಗಿ ಸ ಗಣ, ಭ ಗಣ, ರ ಗಣ , ನ ಗಣ, ಮ ಗಣ , ಯ ಗಣ ಎಂಬ ಅರು ಗಣಗಳು ಬರುತ್ತವೆ. ಬಳಿಕ ಒಂದು ಲಘು ಮತ್ತು ಒಂದು ಗುರು ಬರುತ್ತವೆ. ಈ ಪದ್ಯದ ಉಳಿದ ಮೂರೂ ಪಾದಗಳಲ್ಲಿಯೂ ಇದೇ ರೀತಿಯ ಗಣ ವಿನ್ಯಾಸ ಇರುತ್ತದೆ. ಇಂತಹ ಗಣವಿನ್ಯಾಸವನ್ನು ಹೊಂದಿದ ವರ್ಣವೃತ್ತವನ್ನು 'ಮತ್ತೇಭವಿಕ್ರೀಡಿತವೃತ್ತ' ಎಂದು ಹೇಳುತ್ತಾರೆ.

ಉದಾಹರಣೆ :

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| U U — | — U U | — U — | U UU | — — — | U — — | U — |
| ಭಯಮುಂ | ಲೋಭಮು | ಮೆಂಬ ತ | ಮ್ಮುತೆರ | ಡುಂ ಪಾಪ | ಕ್ಕೆ ಪಕ್ಕಾ | ಗೆ ಪಾ |

- ಕೆಳಗೆ ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ.

  ಅಱಿದೆಂ ನೆಟ್ಟನೆ ಬೆಟ್ಟನಿಂತು ನುಡಿವೈನೀಂ ಕಂದ ಪೋಗಿಂದೆ ಕ |
  ಟ್ಟೞಿದತ್ತಾಗದೆ ಸೋಮವಂಶಮೆನಗಿಂ ಬಾೞ್ವಾಸೆಯೆಲ್ಲಿತ್ತೋ ಬಿ ||
  ಟ್ಟುೞಿದೆಂ ಮತ್ತಿನ ಮಕ್ಕಳಾಸೆಯುಮನಾನೆಂದಳ್ಗೆ ಶೋಕಾಗ್ನಿ ಪೊಂ |
  ಪುೞಿವೋಗುತ್ತಿರೆ ಕರ್ಣನೆಂದನಿನಿತೇಂ ಪೇೞಿಬ್ಬೆ ಚಿಂತಾಂತರಂ ||

- ಕಂದ ಪದ್ಯದ ಲಕ್ಷಣಗಳನ್ನು ಕೆಳಗಿನ ತರಗತಿಯಲ್ಲಿ ಕಲಿತಿರುವಿರಲ್ಲವೇ? ಈ ಕೆಳಗೆ ನೀಡಲಾದ ಪದ್ಯಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿರಿ.

  ಪಿಡಿಯೆಂ ಪುರಿಗಣೆಯಂ ನರ |
  ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ ||
  ರ್ದೊಡಮೞಿಯೆಂ ಪೆರ್ಜಸಮನೆ |
  ಪಿಡಿದೆನ್ನನೆ ರಣದೊಳೞಿವೆನಿರದಡಿಯೆತ್ತಿಂ ||

# ೫. ವ್ಯಕ್ತಿ - ವೃತ್ತಿ

ಪ್ರತಿಯೊಬ್ಬ ಪ್ರಜೆಗೂ ಬದುಕಲು ಪ್ರಾಥಮಿಕ ಅವಶ್ಯಕತೆಗಳಾದ ಅಶನ, ವಸನ, ವಸತಿಗಳು ಅಗತ್ಯ. ಇವುಗಳನ್ನು ಸಂಪಾದಿಸಲು ಯಾವುದಾದರೊಂದು ವೃತ್ತಿಯನ್ನು ಕೈಗೊಳ್ಳಲೇಬೇಕು. ಹಿಂದಿನ ಕಾಲದಲ್ಲಿ ಪ್ರತಿಯೊಂದು ವೃತ್ತಿಯೂ ಪಾರಂಪರಿಕವಾಗಿ ಮುಂದುವರಿಯುತ್ತಿತ್ತು. ಇವುಗಳು ಕುಲವೃತ್ತಿಗಳಾಗಿ ತಿಳಿಯಲ್ಪಡುತ್ತಿದ್ದುವು. ಸಮಾಜದಲ್ಲಿ



ಪರಸ್ಪರಾಶ್ರಯದಿಂದ ಬಾಳುವ ಉದ್ದೇಶವು ಕುಲವೃತ್ತಿಯ ಹಿನ್ನೆಲೆಯಲ್ಲಿತ್ತು. ಜನರಿಗೆ ಮನರಂಜನೆಯನ್ನು ನೀಡುವ ಕೆಲವು ಕಲೆಗಳೂ ವೃತ್ತಿಯ ಸಾಲಿಗೆ ಸೇರಿಕೊಂಡಿವೆ. ವಸ್ತು ವಿನಿಮಯ ಪದ್ಧತಿಯ ಕಾಲದಲ್ಲಿ ಕುಲವೃತ್ತಿಗಳಿಗೆ ಬಹಳಷ್ಟು ಪ್ರಾಧಾನ್ಯವಿತ್ತು.

ಉದ್ಯೋಗದಲ್ಲಿ ಉನ್ನತಿ-ಅವನತಿಗಳು ಸ್ವಾಭಾವಿಕ. ಅದನ್ನು ಸಮಾನ ಧೋರಣೆಯಿಂದ ಸ್ವೀಕರಿಸಬೇಕಾದುದು ಅಗತ್ಯ. ಪ್ರತಿಯೊಬ್ಬ ಉದ್ಯೋಗಿಯೂ ತಾನು ಕೆಲಸಮಾಡುವ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ದುಡಿಯಬೇಕು. ಅದು ತನ್ನ ಕೆಲಸದಲ್ಲಿ ಭಡ್ತಿಯ ಜೊತೆಗೆ ಕೆಲಸ ಮಾಡುವ ಸಂಸ್ಥೆಯ ಉನ್ನತಿಗೂ ಕಾರಣವಾಗುತ್ತದೆ. ಅಲ್ಲವಾದಲ್ಲಿ ಅದು ಅವನತಿಗೂ ಕಾರಣವಾಗುತ್ತದೆ.



‘ಡೊಂಬರ ಚೆನ್ನೆ’ ಎಂಬ ಕಥನ ಕವನವು ಸರ್ವರನ್ನೂ ರೋಮಾಂಚನಗೊಳಿಸುವ ಡೊಂಬರಾಟವನ್ನು ಚಿತ್ರಿಸುತ್ತದೆ. ‘ಮೀನು ಮಾರುವವನು’ ಕತೆಯು ಉದ್ಯೋಗದಲ್ಲಿನ ಉನ್ನತಿಯನ್ನು ಹೇಗೆ ಸ್ವೀಕರಿಸುತ್ತೇವೆಯೋ ಹಾಗೆಯೇ ಅವನತಿಯನ್ನೂ ಸಮಚಿತ್ತದಿಂದ ಸ್ವೀಕರಿಸಬೇಕು ಎಂಬುದನ್ನು ಸೂಚಿಸುತ್ತದೆ. ‘ಲಮೇರಿಯಾ’ ಎಂಬ ಹಾಸ್ಯ





ಲೇಖನವು ಉದ್ಯೋಗ ಕ್ಷೇತ್ರದಲ್ಲಿ ಉಂಟಾಗುವ ಒಂದು ತಪ್ಪು ಹೇಗೆ ಹಲವು ಪ್ರಮಾದಗಳಿಗೆ ಕಾರಣವಾಗುತ್ತದೆ ಎಂಬುದನ್ನೂ ಉದ್ಯೋಗದಲ್ಲಿ ಏಕಾಗ್ರತೆ ಮತ್ತು ಶ್ರದ್ಧೆ ಅಗತ್ಯ ಎಂಬುದನ್ನೂ ತಿಳಿಸುತ್ತದೆ.

ಈ ಮೂರೂ ಪಾಠಗಳು ಉದ್ಯೋಗದ ವಿವಿಧ ಮಜಲುಗಳನ್ನು ತಿಳಿಸುತ್ತವೆ. ಯಾವ ವೃತ್ತಿಯೂ ಕೀಳಲ್ಲ. ಪ್ರಾಮಾಣಿಕತೆಯಿಂದ ದುಡಿಯುವವನು ಸಮಾಜದ ಮನ್ನಣೆಗೆ ಪಾತ್ರನಾಗುತ್ತಾನೆ ಎಂಬುದನ್ನು ತಿಳಿಸುವುದರ ಮೂಲಕ ಮಕ್ಕಳು ಮುಂದಿನ ತಮ್ಮ ವೃತ್ತಿಜೀವನವನ್ನು ಪ್ರಾಮಾಣಿಕವಾಗಿ ಮತ್ತು ಶ್ರದ್ಧೆಯಿಂದ ನಿರ್ವಹಿಸುವ ಸಂದೇಶವನ್ನು ನೀಡುತ್ತದೆ.

### ಸ್ಟಾರ್ಟ್ ಅಪ್ ಕಂಪೆನಿಗಳತ್ತ ಮಾಲುತ್ತಿರುವ ಟೆಕ್ಕಿಗಳು

ಮುಂಬಯಿ, ಸೆಪ್ಟೆಂಬರ್ 4 : ಸ್ಟಾರ್ಟ್ ಅಪ್ ಕಂಪೆನಿಗಳು ಇಂದು ಹೆಚ್ಚಿನ ಸಂಖ್ಯೆಯ ಜನರನ್ನು ಆಕರ್ಷಿಸುತ್ತಿದ್ದು, ಯುವ ಟೆಕ್ಕಿಗಳು ಹೆಚ್ಚಾಗಿ ಇದರ ಕಡೆಗೆ ಗಮನ ಹರಿಸಿದ್ದಾರೆ.

### ಉದ್ಯೋಗ ನಿಯಮದಲ್ಲಿ ಬದಲಾವಣೆ

ದುಬೈ : ದುಬೈ ಸರಕಾರವು ಉದ್ಯೋಗ ನಿಯಮದಲ್ಲಿ ಮಾಡಿದ ಬದಲಾವಣೆಯು ವಿದೇಶದಲ್ಲಿ ಕೆಲಸ ಮಾಡುತ್ತಿರುವಂತಹ ಭಾರತದಂತಹ ದೇಶದ ಜನರ ಉದ್ಯೋಗಕ್ಕೆ ಭೀತಿಯನ್ನು ತಂದೊಟ್ಟಿದೆ. ಇಂದು ದುಬೈಯಲ್ಲಿ ಕೆಲಸ ಮಾಡುತ್ತಿರುವ ಭಾರತೀಯರಿಗೆ ಇದು ಅಭದ್ರತೆಯನ್ನುಂಟುಮಾಡಿದೆ.

### ಪಾರಂಪರಿಕ ಉದ್ಯೋಗಗಳು ಮೂಲೆಗುಂಪಾಗುತ್ತಿವೆಯೆ?

ಮೂಲ್ಕಿ : ಅರಣ್ಯದಲ್ಲಿ ಲಭಿಸುವ ಗಿಡಬಳ್ಳಿಗಳಿಂದ ಬುಟ್ಟಿ, ಮೊರ, ಚಾಪೆ ಇತ್ಯಾದಿಗಳನ್ನು ನಿರ್ಮಿಸುವುದು ಒಂದು ಉದ್ಯೋಗವಾಗಿದ್ದು ಈ ವೃತ್ತಿಯಲ್ಲಿ ತೊಡಗಿದವರಿಗೆ ಅನ್ನದ ದಾರಿಯನ್ನು ಒದಗಿಸುತ್ತಿತ್ತು. ಇಂದೀಗ ಈ ಎಲ್ಲ ವಸ್ತುಗಳು ಪ್ಲಾಸ್ಟಿಕ್ ನಿಂದ ನಿರ್ಮಿಸಲ್ಪಡುತ್ತಿದ್ದು ಈ ಕಾಯಕದಲ್ಲೇ ತೊಡಗಿದವರು ತಮ್ಮ ವೃತ್ತಿಯನ್ನು ಕಳೆದುಕೊಂಡು ನಿರುದ್ಯೋಗಿಗಳಾಗುತ್ತಿದ್ದಾರೆ.

### ಯೂಟ್ಯೂಬ್ ಚಾನೆಲ್ ಗಳ ನಿರ್ಮಾಣ : ಲಕ್ಷಗಟ್ಟಲೆ ವರಮಾನ

ಸಮೂಹ ಮಾಧ್ಯಮವು ಇಂದು ಕೇವಲ ಸಂಪರ್ಕ ಮಾತ್ರವಲ್ಲ ಸಂಪಾದನೆ ಯ ತಾಣವೂ ಆಗಿದೆ. ಯುವಜನರು ಇಂದು ಹಲವು ರೀತಿಯ ಚಾನೆಲ್ ಗಳ ನಿರ್ಮಾಣದ ಮೂಲಕ ಲಕ್ಷಗಟ್ಟಲೆ ಸಂಪಾದಿಸುತ್ತಿದ್ದಾರೆ. ಸ್ವದೇಶದಲ್ಲೂ ವಿದೇಶಗಳಲ್ಲೂ ಪ್ರವಾಸ ನಡೆಸಿ ಅವುಗಳ ವೀಡಿಯೋಗಳ ಪ್ರದರ್ಶನ ಇದಕ್ಕೊಂದು ಉದಾಹರಣೆ ಆಗಿದೆ.

- ಮೇಲೆ ನೀಡಲಾದ ಕೊಲಾಶನ್ನು ಗಮನಿಸಿರಿ. ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

# ಡೊಂಬರ ಚೆನ್ನೆ

ಪಂಜೆ ಮಂಗೇಶರಾಯರು

ಬೆರಗು ಕಣ್ಣಿನ ಬೆರಳ ಮೀಸೆಯ ಬೆರಸಿದಾ ನಗು ಮೋರೆಯಾ,
ಅರಸನಿದ್ದನು ಡೊಂಬರಾಟಕೆ ಸೆರೆಯ ಸಿಕ್ಕಿದ ಮನದಲಿ
ದಾಟಿ ಪಡುಹೊಳೆ ಜನರಸಂದಣಿ ಆಟ ನೋಡಲು ಕೂಡಿತು
ಕೋಟೆ, ಕೊತ್ತಳ, ಮಾಡು, ಮನೆ, ಕೊಂಬೆಗಳ ಮೇಲಿದ್ದರು.

ಗುಲ್ಲು ಮಾಡರು, ಸೊಲ್ಲನಾಡರು
ಎಳ್ಳು ಬಿದ್ದರೆ ಬೊಬ್ಬೆಯು
ಅಲ್ಲಿ ಜನಗಳ ನುಗ್ಗು ನುಗ್ಗಿಗೆ
ಇಲ್ಲ ಸಾಸಿವೆ ಹಾಕಲು

ಗುರು, ಸುಮಂಗಳ, ಬುಧ ಗ್ರಹಂಗಳ
ನಡುವೆ ತಿಂಗಳ ಚೆಲುವಿನಾ
ಅರಸು ಅಂಗಳದಲ್ಲಿ ಜನಂಗಳ
ನಡುವೆ ಸಂಗಳಿಸಿದ್ದನು.

ಆಗ ಬಡಿಯಿತು ಡೋಲು ಬಡಬಡ,
ಬಾಗಿ ಅರಸಿಗೆ ತಲೆಯನು,
ಬೇಗ ತಿರ್‍ರನೆ ತಿರುಗಿ ಸರ್‍ರನೆ
ಲಾಗ ಹಾಕಿದ ಡೊಂಬನು.



ನೀರಿನೊಂದಿಗೆ ಆರು ಬಿಂದಿಗೆ
ಹೇರಿ ನೆತ್ತಿಯ ಮೇಲಕೆ
ಹಾರಿ ಧಿಕ್ಕಿಟ ಕುಣಿದನಕ್ಕಟ
ನೀರು ಹೊರಗಡೆ ಚೆಲ್ಲದೆ!

ತೆಗೆದು ಡೊಂಬನು ಹುರಿಯ ಸುಂಬನು
ಬಿಗಿದು ಬಟ್ಟಲನೇರಿಸಿ,
ಬುಗುರಿಯಂತೆಯೆ ತಿಗುರಿಯಂತೆಯೆ
ನೆಗೆದು ಕುಣಿದನು ಧಿಮಿ ಧಿಮಿ

“ಮಾವಿನಾಟದ, ಹಾವಿನಾಟದ
ಸೋವು ಸೋಜಿಗ ತಿಳಿಯದು!
ಯಾವ ತಂತ್ರವೊ? ಮೋಡಿ ಮಂತ್ರವೊ?
ನಾವು ಅರಿಯೆವು” ಎಂದರು.

ಬಿದಿರು ಒಂದನು ಹೊತ್ತು ತಂದನು
ಮುದುಕ ಡೊಂಬನು ಹೆಗಲಲಿ
ಅದನು ಬಲದಲಿ ಹೂಡಿ ನೆಲದಲಿ
ಚದುರೆ ಮಗಳನು ಕರೆದನು.

ಹೆಣ್ಣು ಬಂದಳು ಹಣ್ಣು ಬಿಡದಾ
ಸಣ್ಣ ಬಳ್ಳಿಯ ಬೆಡಗಿನಾ,
ಮಣ್ಣೊಳಾಡುವ ಬೆಣ್ಣೆಯಂತಿಹ
ಕಣ್ಣು ಕಟ್ಟಿನ ಸೊಬಗಿನಾ.

ಮಣಿದು ಹಗ್ಗಕ್ಕೆ ಹಾರಿ ಸಿಡಿದಳು ಕುಣಿವ ಮರಿ ಸಿಡಿಲಂತೆಯೇ
ಹೆಣೆದು ಮೈಯನು, ಹಾವಿನಂತೆಯೆ ಗಣೆಗೆ ಸರಿದಳು ಸರ್ರನೆ!
ಬಳಿಕ ಬೆನ್ನನು ಕೋದು, ಕೈಕಾಲ್ಗಳನು ತೇಲಿಸಿ ಹೊಳೆದಳು,
ಮಳೆಯ ಬಿಲ್ಲಿನ ಹಾಗೆ, ಸ್ಥಾಣುವಿನೆಳೆಯ ಚಂದ್ರನ ಚಂದದಿ.
ಕೊರಳು ಮಾಲಿತು, ಹೆರಳು ಜೋಲಿತು, ಕುರುಳು ತೇಲಿತು ತರಳೆಯಾ,
ಉರುಳುತಲಿ ಕಾಲ್ ಬೆರಳ ಕೊನೆಯಲಿ ಮರಳಿ ಹೊಲಿದಳು ಜಡೆಯನು.

ಗಳೆಯ ಡೊಂಬತಿಯಾಟದಾ ಪರಿ
ಗಾಳಿ ಕೈಗಿರಿಗಿಟಗಿರಿ,
ಸುಳಿಯ ನೀರಿನ ತಲೆಯ ಹೂಗರಿ,
ಸೆಳೆಯ ಮಿಂಚಿನ ತೋಳ್ ಸರಿ.

ಅರರೆ! ಡೊಂಬರ ಹೆಣ್ಣುಮರಿ
ಗರಗರನೆ ಎತ್ತರ ಭರದಲಿ
ತಿರುಗುವಾತೆರ ಹುಡಿಯು ಅರಸಿನ
ಎರಚಿತೆರಚಿತು ಕಣ್ಣಿಗೆ,

ಬಿಗಿದು ಬಿಚ್ಚುವ, ಬಿಚ್ಚಿ ಬಿಗಿಯುವ,
ಮುಗಿಲ ಕೂದಲ ಬಲೆಯಲಿ
ಇಗೊ! ಇಗೋ!
ಸಿಲುಕಿದುದು ಅರಸನ
ಮಿಗದ ಕಣ್ಗಳ ಜೋಡಿಯು !

## ಕವಿ ಪರಿಚಯ



ಪಂಜೆ ಮಂಗೇಶರಾಯರು ೧೮೭೪ ಫೆಬ್ರವರಿ ೨೨ ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಜನಿಸಿದರು. ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಂಟ್ವಾಳದಲ್ಲಿ ಮುಗಿಸಿ ಮಂಗಳೂರಿನಲ್ಲಿ ಬಿ. ಎ ಪದವಿಯನ್ನು ಪಡೆದರು. ಮಂಗಳೂರಿನಲ್ಲಿ ಕನ್ನಡ ಪಂಡಿತರಾಗಿಯೂ ಬಳಿಕ ಶಾಲಾ ಇನ್ಸ್ಪೆಕ್ಟರಾಗಿಯೂ ಸೇವೆಯನ್ನು ಸಲ್ಲಿಸಿದರು. ಪಂಚಕಜ್ಜಾಯ ಎಂಬ ಸಂಶೋಧನ ಲೇಖನಗಳ ಸಂಗ್ರಹವನ್ನೂ, ಕೋಟಿಚೆನ್ನಯ ಎಂಬ ಕಥೆಯನ್ನೂ, ಐತಿಹಾಸಿಕ ಕಥಾವಳಿ ಎಂಬ ಕಥಾ ಸಂಕಲನ ಹಾಗೂ ಹಲವಾರು ಶಿಶುಗೀತೆಗಳನ್ನೂ ಬಾಲ ಸಾಹಿತ್ಯ ಕಥೆಗಳನ್ನೂ ಬರೆದಿದ್ದಾರೆ. 'ಕವಿಶಿಷ್ಯ' ಎಂಬುದು ಇವರ ಕಾವ್ಯನಾಮ ಅವರ 'ನನ್ನ ಚಿಕ್ಕತಾಯಿ' ಎಂಬುದು ಹೊಸಗನ್ನಡದ ಮೊದಲ ಕತೆ. ಅವರು ೧೯೩೭ ಅಕ್ಟೋಬರ್ ೨೪ರಂದು ನಿಧನರಾದರು.

ಪ್ರಸ್ತುತ ಕವನವನ್ನು 'ಪಂಜೆ ಮಂಗೇಶರಾಯರ ಸಮಗ್ರ ಸಾಹಿತ್ಯ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಡೊಂಬರಾಟವನ್ನು ವೀಕ್ಷಿಸಲು ಯಾರೆಲ್ಲಾ ಸೇರಿದ್ದರು?

೨. ಅಲ್ಲಿ ಸೇರಿದ ಜನರು ಡೊಂಬರಾಟವನ್ನು ಯಾವ ರೀತಿ ವೀಕ್ಷಿಸುತ್ತಿದ್ದರು?

೩. ಡೊಂಬನು ಯಾವ ರೀತಿ ಡೊಂಬರಾಟವನ್ನು ಆಡಿದನು?

೪. ಡೊಂಬರ ಹುಡುಗಿಯ ಡೊಂಬರಾಟದ ಬಗೆ ಹೇಗಿತ್ತು?

## ಗದ್ಯರೂಪಕ್ಕೆ ಪರಿವರ್ತಿಸಿರಿ

'ಡೊಂಬರ ಚೆನ್ನೆ' ಕಥನ ಕವನದ ಆಶಯವನ್ನು ಗದ್ಯರೂಪದಲ್ಲಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

'ಡೊಂಬರ ಚೆನ್ನೆ' ಪದ್ಯದ ಈ ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ.

ಗುರು, ಸುಮಂಗಳ, ಬುಧ ಗ್ರಹಂಗಳ
ನಡುವೆ ತಿಂಗಳ ಚೆಲುವಿನಾ
ಅರಸು ಅಂಗಳದಲ್ಲಿ ಜನಂಗಳ
ನಡುವೆ ಸಂಗಳಿಸಿದ್ದನು.

## ಲೇಖನ ಬರೆಯಿರಿ

ಡೊಂಬರಾಟವು ಹಿಂದಿನ ಕಾಲದಲ್ಲಿ ಒಂದು ಕುಲವೃತ್ತಿಯಾಗಿತ್ತು. ಇಂತಹ ಕುಲವೃತ್ತಿಗಳು ಇಂದು ನಶಿಸಿ ಹೋಗುತ್ತಿವೆಯೇ? ವಿಶ್ಲೇಷಿಸಿ ಲೇಖನ ಬರೆಯಿರಿ.

## ವಾಕ್ಯದಲ್ಲಿ ಪ್ರಯೋಗಿಸಿರಿ

ಮಯೂರಿಯು ವೇದಿಕೆಯಲ್ಲಿ ಧಿಮಿ ಧಿಮಿ ಕುಣಿದಳು.

ಅಡಿಗೆರೆ ಎಳೆದಂತಹ ಅನುಕರಣವಾಚಕಗಳು ಈ ಕವನದಲ್ಲಿವೆ. ಅವುಗಳನ್ನು ಆಯ್ದು ಸ್ವಂತ ವಾಕ್ಯಗಳಲ್ಲಿ ಬಳಸಿರಿ.

## ಮಾಹಿತಿ ಸಂಗ್ರಹಿಸಿರಿ

ಕೆಲವು ಕುಲವೃತ್ತಿಗಳು ಕಲೆಗಳೂ ಆಗಿವೆಯಲ್ಲವೇ? ಅವುಗಳ ಮಾಹಿತಿಗಳನ್ನು ಸಂಗ್ರಹಿಸಿ ನಿಮ್ಮ ಶಾಲಾ ಬ್ಲಾಗ್ ನಲ್ಲಿ ಪ್ರಕಟಿಸಿರಿ.

* * *

# ಮೀನು ಮಾರುವವನು

**ಬೊಳುವಾರು ಮೊಹಮ್ಮದ್ ಕುಂಞಿ**

ಹಿಂದಿನ ದಿನದ ಮುಸ್ಸಂಜೆ ಹೊತ್ತಿನಲ್ಲಿ ಬಂದು ಹೋಗಿದ್ದ ಅದ್ರಾಮ ಬ್ಯಾರಿ ಎಲ್ಲ ವಿವರಗಳನ್ನು ನೀಡದೆ ಹೋಗಿದ್ದಲ್ಲಿ ಸುಬ್ರಾಯ ಜೋಯಿಸರಿಗೆ ಅಚ್ಚರಿಗಿಂತಲೂ ಗಾಬರಿ ಉಂಟಾಗುವ ಸಾಧ್ಯತೆಗಳೇ ಹೆಚ್ಚು. ಈ ಹಿಂದೆಂದೂ ಅಂಗಳಕ್ಕೂ ಹೆಜ್ಜೆ ಇಡದಿದ್ದ ತರುಣ ಇಂದು ನಡು ಮಧ್ಯಾಹ್ನದ ಹೊತ್ತಲ್ಲಿ ತಲೆ ಬಾಗಿಲಿಗೆ ಇಡಿಯಾಗಿ ನಿಂತಿದ್ದ!

ಜೋಯಿಸರು ಕೈಸನ್ನೆಯಲ್ಲಿಯೇ ಒಳಗೆ ಬರಲು ಸ್ವಾಗತಿಸಿದರು. ಜನ್ನತುಲ್ ಫಿರ್ದೌಸ್ ಅತ್ತರಿನ ಪರಿಮಳದ ಜೊತೆ ಯೌವ್ವನದ ಎಲ್ಲ ಸೊಗಸುಗಳನ್ನು ಒಳಗೊಂಡ ಯುವಕ ನಡೆದು ಬಂದು ಜೋಯಿಸರ ಎದುರು ಹಾಸಿದ್ದ ಹುಲ್ಲು ಚಾಪೆಯಲ್ಲಿ ನಮಾಜಿಗೆ ಕೂರುವವನಂತೆ ಕಾಲು ಮಡಚಿ ಕುಳಿತ.

ಜೋಯಿಸರು, ಹೆಮ್ಮೆಯ ನಗು ಚೆಲ್ಲಿ ಗಂಭೀರವಾದ ಧ್ವನಿಯಲ್ಲಿ "ನಿನ್ನ ಹೆಸರು ರಜಾಕ್ ಅಲ್ಲವಾ?" ಎಂದು ಪ್ರಶ್ನಿಸಿದರು.

"ಹೌದು"

"ಕಳೆದ ಶುಕ್ರವಾರದಂದು ಇದೇ ಹೊತ್ತಿನಲ್ಲಿ ನೀನು ಸಿನಿಮಾ ಥಿಯೇಟರ್ ನಲ್ಲಿ ಇದ್ದಿಯಲ್ಲವೇ?"

"ಹೌದು."

"ಇವತ್ತು ಇಲ್ಲಿಗೆ ಬರಲಿಕ್ಕುಂಟು ಅಂತ ಸಿನೇಮಾಕ್ಕೆ ಹೋಗಲಿಲ್ಲ ಅಲ್ಲವೇ?'"

"ಹೌದು"

"ಇವತ್ತು ನೀನು ಎಂದಿನ ಹಾಗೆ ಲಿಬರ್ಟಿ ಹೋಟೆಲಿಗೆ ಹೋಗದೆ ಯಾವುದೋ ಉಡುಪಿ ಹೋಟೆಲಲ್ಲಿ ತರಕಾರಿ ಊಟ ತಿಂದುಕೊಂಡು ಬಂದಿರುವೆ ಅಲ್ಲವೇ?"

"ಹೌದು"

"ನೀನೊಂದು ಹಳೆಯ ಮೋಟಾರ್ ಕಾರನ್ನು ಖರೀದಿಸಲು ಯೋಚಿಸಿದ್ದು, ಆ ಬಗ್ಗೆ ಪ್ರಶ್ನೆ ಇಡಲು ಬಂದದ್ದು ಅಲ್ಲವೇ?"

"ಹೌದು".

"ಇದೆಲ್ಲವೂ ನನಗೆ ಹೇಗೆ ಗೊತ್ತಾಯಿತು ಹೇಳು"

"ಜವುಳಿ ಅಂಗಡಿ ಅದ್ರಾಮಣ್ಣ ಹೇಳಿ ಹೋಗಿರುವುದರಿಂದ"

ಇಬ್ಬರೂ ಅದುವರೆಗೆ ತಡೆದು ಹಿಡಿದುಕೊಂಡಿದ್ದ ನಗು ಗೊಳ್ಳನೆ ಪ್ರಕಟವಾಗಿತ್ತು. ಇಬ್ಬರೂ ಸಾಕಷ್ಟು ನಕ್ಕು ಪರಸ್ಪರ ಪ್ರೀತಿ ಅಭಿಮಾನಗಳನ್ನು ಹಂಚಿಕೊಂಡರು. ಅರುವತ್ತರ ಹೊಸ್ತಿಲ ಮೇಲೆ ನಿಂತಿರುವ ಗಿಣಿಮೂಗಿನ, ಅಗಲ ಕಿವಿಯ, ಕೋಲು ಮುಖದ, ಕಡ್ಡಿ ದೇಹದ ಜೋಯಿಸರ ದೊಡ್ಡ ಕಣ್ಣುಗಳ ಹೊಳಪನ್ನು ಕಂಡರೆ ಎಂಥವರೂ ತಲೆಬಾಗಬೇಕು.

ತಮ್ಮೆದುರು ಕುಳಿತ ತರುಣನ ಮುಖವನ್ನು ನೋಡುತ್ತಾ ಜೋಯಿಸರು ನಗುತ್ತಾ, "ಏಯ್ ಇವಳೇ, ನಿನ್ನ ಮೀನಿನ ಗಡಿಯಾರ ಬಂದಿದೆ ನೋಡು" ಎಂದು ಕೂಗಿ ಕರೆದರು.

ಜೋಯಿಸರ ಕರೆಗಾಗಿಯೇ ಕಾಯುತ್ತಿದ್ದಂತಿದ್ದ ಜೋಯಿಸರ ಪತ್ನಿ ಚಾವಡಿಗೆ ಕಾಲಿರಿಸಿದವರೇ ರಜಾಕನ್ನು ಕಂಡು ಗಕ್ಕನೆ ನಿಂತು ಬಿಟ್ಟರು. ಚಾಪೆಯ ಮೇಲೆ ಶಿಲಾಮೂರ್ತಿಯಂತೆ ಕುಳಿತಿರುವ ತರುಣ ಜೋಯಿಸರ ಪತ್ನಿಗೆ ಅಪರಿಚಿತನೇನೂ ಅಲ್ಲ. ಮಳೆಗಾಲದ ಮೂರು ನಾಲ್ಕು ತಿಂಗಳುಗಳನ್ನು ಹೊರತುಪಡಿಸಿ ಪ್ರತಿದಿನವೂ ಎಂಬಂತೆ ಕಣ್ಣಿಗೆ ಬೀಳುತ್ತಿರುವವನು. ಸಾಯಂಕಾಲದ ೪:೦೦ ಹೊಡೆದು ಮತ್ತೊಂದು ೫ ನಿಮಿಷ ದಾಟಿದರೆ ಸಾಕು ಪೋಂ ಪೋಂ ಹಾರ್ನ್ ನೊಂದಿಗೆ ಅವನ ಮೀನಿನ ಸೈಕಲು ಮನೆ ಎದುರಿನ ರಸ್ತೆಯಲ್ಲಿ ಹಾದು ಹೋಗುತ್ತಿರುತ್ತದೆ. ರಸ್ತೆಯ ಮುಂದಿನ ತಿರುವಿನಲ್ಲಿರುವ ಕಿರು ಸೇತುವೆಯ ಬಳಿ ಅವನಿಗಾಗಿಯೇ ಕಾದು ನಿಂತಿರುವ ಹೆಂಗಸರು, ಮಕ್ಕಳು ಅವನ ಸೈಕಲನ್ನು ಸುತ್ತುವರಿಯುವ ದೃಶ್ಯವನ್ನು ಜೋಯಿಸರ ಮನೆ ಚಾವಡಿಯ ಕಿಟಕಿಯಿಂದಲೇ ಕಾಣಬಹುದು.

ಅದು ಅವನ ದೈನಂದಿನ ಮೀನು ಮಾರಾಟದ ಕೊನೆಯ ತಾಣ. ಅಲ್ಲಿಗೆ ತಲುಪುವಷ್ಟರೊಳಗೆ ಅವನ ಸೈಕಲಿನ ಕ್ಯಾರಿಯರಿಗೆ ಕಟ್ಟಿರುವ ಎರಡು ಬುಟ್ಟಿಗಳ ಮೀನುಗಳು ಮಾರಾಟವಾಗಿರುತ್ತವೆ. ಸೈಕಲಿನ ಹ್ಯಾಂಡಲಿಗೆ ತೂಗು ಹಾಕಿರುವ ಓಲೆಗರಿಯ ಚೀಲದಲ್ಲಿ ಉಳಿದಿರುವ ಮೀನುಗಳನ್ನೆಲ್ಲ ಸಿಕ್ಕ ಬೆಲೆಗೆ ಮಾರಾಟ ಮಾಡುವ ರಜಾಕ್ ಅಲ್ಲಿಂದ ನೇರವಾಗಿ ಹೋಗುವುದು ಪೋಸ್ಟ್ ಆಫೀಸ್ ಬೀದಿಯ ಕೊನೆಯಲ್ಲಿರುವ ಸರಕಾರಿ ಬಾವಿಯ ಬಳಿಗೆ ಸ್ನಾನಕ್ಕೆ.

ರಜಾಕ್‌ನ ಮೀನಿನ ಸೈಕಲು ಯಾವ ಹೊತ್ತಿನಲ್ಲಿ ಯಾವ ಜಾಗದಲ್ಲಿ ಇರುತ್ತದೆ ಎಂಬುದು ಕೇವಲ ಮೀನು ತಿನ್ನುವವರಿಗೆ ಮಾತ್ರವಲ್ಲ ಮೀನಿನ ಪರಿಮಳದ ನೆನಪಿಗೇ ನೂರು ಮಾರು ದೂರ ಹಾರುವ ಇತರರಿಗೂ ಕಂಠಪಾಠ. ಅವನ ದುಡಿಮೆ ಹಾಗೂ ಕಟ್ಟುನಿಟ್ಟಿನ ಸಮಯ ನಿಷ್ಠೆಯಿಂದಾಗಿ "ರೇಡಿಯೋ ಟೈಮ್ ರಜಾಕ್" ಎಂದೇ ಖ್ಯಾತನಾಗಿದ್ದ. ಅವನ ಬಗ್ಗೆ ಉಳಿದವರ ಹೊಗಳಿಕೆಗಿಂತ ಹೆಚ್ಚಾಗಿ ಮುತ್ತುಪಾಡಿ ಜೋಯಿಸರೇ ಒಮ್ಮೆ ಸಾರ್ವಜನಿಕವಾಗಿ ಹೊಗಳಿದ್ದರು.

ಎರಡು ವರ್ಷಗಳ ಹಿಂದೆ ಸಹಸ್ರಲಿಂಗೇಶ್ವರ ದೇವಸ್ಥಾನದಲ್ಲಿ ಅಭೂತಪೂರ್ವವಾಗಿ ಆಚರಿಸಲ್ಪಟ್ಟ ಗಣೇಶೋತ್ಸವದ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಉಪನ್ಯಾಸ ನೀಡುತ್ತಿದ್ದ ಜೋಯಿಸರು, 'ಕಣ್ಣು ಮುಚ್ಚಿ, ಕೈ ಮುಗಿದು ದೇವರನಾಮ ಹಾಡುವುದಷ್ಟೇ ಭಕ್ತಿಯಲ್ಲ, ಮಾಡುವ ಕೆಲಸ ಯಾವುದೇ ಆಗಿರಲಿ, ಅದನ್ನು ದೇವರ ಕೆಲಸ ಎಂಬುದಾಗಿ ಆ ಕೆಲಸವನ್ನು ಪೂಜೆಯಾಗಿ ನಂಬಿ ದುಡಿದರೆ ಪ್ರತಿಫಲ ಸಿಗುವುದು ಖಂಡಿತ. ಮೀನು ಮಾರುವ ಹುಡುಗ ರಜಾಕ್ ಇದಕ್ಕೆ ಉದಾಹರಣೆ' ಎಂದ ಮಾತು ಊರೊಳಗೆಲ್ಲ ಸುದ್ದಿಯಾಗಿತ್ತು.

ಶುಕ್ರವಾರದಂದು ರಜಾಕ್ ಮೀನು ವ್ಯಾಪಾರ ನಡೆಸುವುದಿಲ್ಲ. ಉಳಿದ ದಿನಗಳಲ್ಲಿ ಅವನನ್ನು ಗುರುತಿಸಲು ಮೂಗು ಸಾಕಾದರೆ ಶುಕ್ರವಾರದಂದು ಅವನನ್ನು ಗುರುತಿಸಲು ಕಣ್ಣುಗಳ ಅಗತ್ಯ ಬೀಳುತ್ತಿತ್ತು. ಶುಕ್ರವಾರದಂದು ಅವನನ್ನು ಕಾಣಬೇಕು. ಅಡಿಯಿಂದ ಮುಡಿವರೆಗೆ ಮಾತ್ರವಲ್ಲ ಶುಕ್ರವಾರಕ್ಕೆಂದೇ ಮೀಸಲಾಗಿರಿಸಿರುವ ರಬ್ಬರಿನ ಬಿಳಿ ಬಣ್ಣದ ಚಪ್ಪಲಿಗಳು ಕೂಡ ಪರಿಮಳದ ಸಾಬೂನಿನಿಂದ ಘಮಘಮಿಸಲ್ಪಡುತ್ತವೆ. ಮಧ್ಯಾಹ್ನದ ಒಂದು ಘಂಟೆ

ಹೊಡೆಯುವಷ್ಟರಲ್ಲಿ ರಜಾಕ್ ಮಸೀದಿ ಒಳಗೆ ಹಾಜರು. ಆಗ ಅವನ ಉಡುಪು ನೋಡಬೇಕು. ಮಿಂಚಿನಂತೆ ಶುಭ್ರ ಬಿಳುಪು ಅನ್ನುತ್ತಾರಲ್ಲ ಹಾಗಿರುತ್ತದೆ. ತುಂಬುತೋಳಿನ ಬಿಳಿ ಅಂಗಿ, ಹಾಲು ಬಿಳಿಯ ಡಬಲ್ ಧೋತಿ, ಕತ್ತಿನ ಹಿಂಭಾಗದಲ್ಲಿ ಅಂಗಿಯ ಕಾಲರನ್ನು ಬಳಸಿ ಇರಿಸಿದ ನೀಲಿ ಅಥವಾ ಹಸಿರು ಅಂಚಿನ ಅಚ್ಚ ಬಿಳಿಯ ಕರವಸ್ತ್ರ. ಅವನು ಮಸೀದಿಯ ಮೆಟ್ಟಲೇರಿದನೆಂದರೆ ಅವನು ಪೂಸಿದ ಅತ್ತರಿನ ಕಂಪಿನಿಂದ ಇಡೀ ಮಸೀದಿಯೇ ಘಮ ಘಮಿಸುತ್ತದೆ.

ಜುಮ್ಮಾನಮಾಜು ಮುಗಿಸಿಕೊಂಡು ರಿಕ್ಷಾದಲ್ಲಿ ಲಿಬರ್ಟಿ ಮಿಲಿಟರಿ ಹೋಟೆಲಿಗೆ ಊಟಕ್ಕೆ. ಊಟದ ಬಳಿಕ ರಿಕ್ಷಾದಲ್ಲೇ ಅಪ್ಸರಾ ಥಿಯೇಟರಿಗೆ. ಷೋ ಕಳೆದ ಬಳಿಕ ಅದ್ರಾಮ ಬ್ಯಾರಿಯ ಜವುಳಿ ಅಂಗಡಿಗೆ. ೮:೦೦ ಘಂಟೆವರೆಗೆ ಅಲ್ಲಿ ಕುಳಿತುಕೊಳ್ಳುತ್ತಾನೆ. ಅದ್ರಾಮ ಬ್ಯಾರಿಯ ಹೊರತಾಗಿ ಯಾರಲ್ಲೂ ಹೆಚ್ಚಿನ ಮಾತುಕತೆಯಿಲ್ಲ. ಲಿಬರ್ಟಿ ಹೋಟೆಲಲ್ಲಿ ರಾತ್ರಿ ಊಟ ಮುಗಿಸಿ ಮನೆ ಸೇರುತ್ತಾನೆ.

ಜೋಯಿಸರ ಪತ್ನಿಯೂ ರಜಾಕ್ ನ ತಾಯಿಯೂ ಒಂದೇ ಊರಿನವರು. ಒಂದೇ ದಿನ ಮದುವೆಯಾಗಿ ಮುತ್ತುಪಾಡಿಯನ್ನು ಸೇರಿದವರು. ಮನೆಯಲ್ಲಿ ಏನಾದರೂ ವಿಶೇಷವಿದ್ದರೆ ರಜಾಕ್ ನ ತಾಯಿ ಬುತ್ತಿ ಕಟ್ಟಿಕೊಂಡು ಹೋಗದ ದಿನವಿಲ್ಲ. ಆದರೆ ರಜಾಕ್ ಒಮ್ಮೆಯೂ ಆ ಮನೆಯ ಅಂಗಳಕ್ಕೆ ಕಾಲಿರಿಸಿದವನಲ್ಲ. ಇಂದು ರಜಾಕನನ್ನು ತಮ್ಮ ಮನೆಯ ಚಾವಡಿಯಲ್ಲಿ ಕಂಡಾಗ ಜೋಯಿಸರ ಪತ್ನಿಗೆ ಅಚ್ಚರಿಯಿಂದ ಬಾಯಿ ಕಟ್ಟಿ ಹೋಗಿತ್ತು. ಕಲ್ಲಿನ ಕಂಬದಂತೆ ನಿಂತ ಪತ್ನಿಯತ್ತ ತುಂಟ ನಗು ಚೆಲ್ಲಿ, “ಇವತ್ತು ಹೇಳು ನೋಡುವ, ನಿನ್ನ ಯಾವ ಸುಪುತ್ರ ಇವನಷ್ಟು ಕ್ಲೀನಾಗಿ ಇದ್ದಾನೆಂತ” ಎಂದು ಪತ್ನಿಯನ್ನು ಛೇಡಿಸಿದ್ದರು. ಆಗ ರಜಾಕ್ ಮುಜುಗರದ ಮುದ್ದೆಯಾಗಿದ್ದ.

ಕಲ್ಲಿನ ಕಂಬದಂತೆ ನಿಂತ ಪತ್ನಿ, ರಜಾಕಿಗೆ ಆಸರಿಗೆ ತರುತ್ತೇನೆ ಎಂದು ಹೇಳಿ ಒಳಗೆ ಹೋದಾಗ ಜೋಯಿಸರು “ನೋಡು ರಜಾಕ್, ನಿನ್ನೆ ಅದ್ರಾಮ ಬ್ಯಾರಿ ಬಂದಾಗಲೇ ಹೇಳಿದ್ದೆ. ಭವಿಷ್ಯ ತಿಳಿದುಕೊಳ್ಳುವ ಅಗತ್ಯ ಹೆಚ್ಚಿರುವುದು ವರ್ತಮಾನದ ಬಗ್ಗೆ ತೃಪ್ತಿ ಇಲ್ಲದವನಿಗೆ, ನಾಳೆ ಏನಾಗುತ್ತದೆ ಎಂದು ಭಯಪಡುವವನಿಗೆ. ನಿನಗೆ ಈಗ ಇದರ ಅಗತ್ಯವಿಲ್ಲ. ನೀನೆಲ್ಲ ತೀರ್ಮಾನ ಮಾಡಿಯಾಗಿದೆಯಂತೆ. ಅಡ್ವಾನ್ಸ್ ಕೂಡ ಕೊಟ್ಟಿದ್ದೀಯಂತೆ. ಈಗ ನನ್ನ ಕವಡೆ ಲೆಕ್ಕಾಚಾರದಂತೆ ವಾಹನ ಖರೀದಿ ನಷ್ಟವಾಗುತ್ತದೆ ಅಂತ ಹೇಳಿಬಿಟ್ಟರೆ ನೀನು ಖರೀದಿಸುವುದೇ ಇಲ್ವಾ?” ಎಂದು ಪ್ರಶ್ನಿಸಿದ್ದರು.

ರಜಾಕ್ ತಬ್ಬಿಬ್ಬಾಗಿದ್ದ. ಕಾರು ಖರೀದಿಸುವ ಮಾತುಗಳೆಲ್ಲ ಮುಗಿದು ಅಡ್ವಾನ್ಸ್ ಕೊಟ್ಟದ್ದೂ ಆಗಿದೆ. ಮುಂದಿನ ಸೋಮವಾರ ಕಾರು ಸ್ವಂತದ್ದಾಗುತ್ತದೆ. ತಿಂಗಳಿಗೆ ೭೦೦ ರೂ ಕಟ್ಟುವುದು ದೊಡ್ಡ ಸಂಗತಿ ಏನಲ್ಲ. ಈಗ ಯಾರು ಏನು ಹೇಳಿದರೂ ಹಿಂದಕ್ಕೆ ಅಡಿ ಇಡುವ ಪ್ರಶ್ನೆಯೇ ಇಲ್ಲ. ಹೀಗೆ ಚಿಂತಿಸುತ್ತಿದ್ದಾಗಲೇ ಜೋಯಿಸರ ಪತ್ನಿ ಹಾಲಿನೊಂದಿಗೆ ಬಂದಿದ್ದರು. ಜೋಯಿಸರು ಹಾಲಿನ ಲೋಟವನ್ನು ತೆಗೆದುಕೊಂಡು ಎರಡು ಕೈಗಳಲ್ಲಿ ಹಿಡಿದು ರಜಾಕ್ ಗೆ ನೀಡಿದರು. “ಇದನ್ನು ಕುಡಿದು ಹೋಗು, ನಿನಗೆ ಒಳ್ಳೆಯದಾಗಲಿ” ಎಂದು ಹರಸಿದರು.

* * *

ಮುತ್ತುಪಾಡಿಯ ಸಬ್ ಪೋಸ್ಟ್ ಮಾಸ್ಟರ್ ನಾರಾಯಣ ಪ್ರಭುಗಳು ಆ ಊರಿನ ಗಣ್ಯರು. ಸಹಸ್ರಲಿಂಗೇಶ್ವರ ದೇವಸ್ಥಾನದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಅದ್ದೂರಿಯಾಗಿ ನಡೆಸಿದ ಸಂಘಟಕ ಪ್ರಮುಖರು. ಅವರೇ ಜೋಯಿಸರನ್ನು ವೇದಿಕೆಗೆ ಆಮಂತ್ರಿಸಿ ಸನ್ಮಾನಿಸಿದವರು. ಇವರ ಇಬ್ಬರ ಗೆಳೆಯ ಅನಂತ ಭಟ್ಟ, ಯಾವ ವಿಷಯವನ್ನು ಪ್ರಸ್ತಾಪಿಸಿದರೂ ಅದು ಹಾಗಲ್ಲ ಸ್ವಾಮಿ ಹೀಗೆ ಎಂದು ಅಡ್ಡ ಮಾತಿನಿಂದಲೇ ಮಾತುಗಳನ್ನು ಆರಂಭಿಸುವ, ಅವರು ಕೂಡಾ ರಜಾಕ್‌ನ ಕುರಿತು "ಆ ಹುಡುಗನಿಗೆ ಏನು ನಯ, ಏನು ನಿಯತ್ತು! ರಸ್ತೆ ಬದಿಯಲ್ಲಿ ಕಂಡರೆ ಸೈಕಲ್ ನಿಂದ ಇಳಿದು ರಸ್ತೆ ಬದಿಯಲ್ಲಿ ನಿಂತು ಅದೇನು ಗೌರವ ಕೊಡುತ್ತಾನೆ ಗೊತ್ತುಂಟಾ?" ಎಂಬುದಾಗಿ ಗಣೇಶೋತ್ಸವದ ಸಂದರ್ಭದಲ್ಲಿ ಜೋಯಿಸರು ಹೇಳಿದ್ದ ಮಾತುಗಳನ್ನು ಸಮರ್ಥಿಸಿದ್ದರು.

ಇವೆಲ್ಲವೂ ಪ್ರಭುಗಳಿಗೆ ಮತ್ತೆ ನೆನಪಾದುದು, ಅದ್ರಾಮ ಬ್ಯಾರಿ "ಪ್ರಭುಗಳೇ, ನಮ್ಮ ರಜಾಕ್ ನ ಕಾರು ಆಕ್ಸಿಡೆಂಟ್ ಆಗಿದೆಯಂತೆ, ಮಂಗಳೂರಿನಿಂದ ಮೀನು ತರುತ್ತಿರುವಾಗ ಬಂಟ್ವಾಳದ ಬಳಿಯ ತಿರುವೊಂದರಲ್ಲಿ ಲಾರಿಗೆ ಬಡಿದು ಗದ್ದೆಗೆ ಉರುಳಿ ಬಿತ್ತಂತೆ. ಬಾಗಿಲು ಕಿತ್ತು ಹೋಗಿ ರಜಾಕ್ ಹೊರಗೆ ಎಸೆಯಲ್ಪಟ್ಟ ಕಾರಣ ಅಪಾಯಕಾರಿ ಏಟು ಏನು ಆಗಿಲ್ಲವಂತೆ. ಕಾರು ಮಾತ್ರ ಹುಡಿ ಹುಡಿ ಆಗಿದೆಯಂತೆ" ಎಂದಾಗ.

ರಜಾಕ್ ಕಾರು ಖರೀದಿಸುವ ಮೊದಲು ಜೋಯಿಸರ ಬಳಿಗೆ ಹೋಗಿದ್ದದ್ದು, ಕವಡೆಗಳತ್ತ ಕಣ್ಣು ಕೂಡ ಹಾಯಿಸದೆ ನಿನಗೆ ಇದರ ಅಗತ್ಯವಿಲ್ಲ ಎಂದು ಹೇಳಿ ಕಳುಹಿಸಿದುದು ಪ್ರಭುಗಳಿಗೆ ತಿಳಿದಿತ್ತು. ಆಕ್ಸಿಡೆಂಟಿನ ಸುದ್ದಿ ತಿಳಿದಾಗ ಅವರಿಗೆ ಗೊಂದಲವಾಗಿತ್ತು. ಹಾಗೆಯೇ ಜೋಯಿಸರ ಮನೆಗೆ ಧಾವಿಸಿ, ಈ ವಿಚಾರವನ್ನು ಹೇಳಿದಾಗ ಜೋಯಿಸರು ಏನು!ಏನು! ಎನ್ನುತ್ತಾ ದಿಙ್ಮೂಢರಾದರು. ಕೈಕಾಲುಗಳಲ್ಲಿ ಶಕ್ತಿಯೇ ಕಳೆದುಕೊಂಡಂತೆ ಕುಸಿದು ಕುಳಿತರು.

ಗಾಬರಿಗೊಂಡ ಪ್ರಭುಗಳು "ಭಯಪಡುವ ಪ್ರಸಂಗವಿಲ್ಲ. ಹುಡುಗನಿಗೆ ಏನೋ ಒಂದಷ್ಟು ತರಚಿದ ಗಾಯ ಆಗಿದೆಯಂತೆ" ಎಂದರು. ಜೋಯಿಸರು ಕುಳಿತ ಭಂಗಿ ಬದಲಿಸಲಿಲ್ಲ. ಪ್ರಭುಗಳತ್ತ ನೋಡಲೂ ಇಲ್ಲ. ಪ್ರಭುಗಳು ಮತ್ತೂ ಮುಂದುವರಿದು "ಹೀಗೆಲ್ಲ ಆಗುತ್ತದೆ ಎಂದು ಗೊತ್ತಿದ್ದೇ ತಾವು ಪ್ರಶ್ನೆ ಇಡುವುದು ಬೇಡವೆಂದದ್ದಾ?" ಎಂದು ಪ್ರಶ್ನಿಸಿದರು. ಜೋಯಿಸರು 'ಅಯ್ಯೋ, ದೇವರೇ' ಎಂದು ಉದ್ಗರಿಸಿ ಎರಡೂ ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡರು. ತನ್ನ ಮೇಲೆ ಇಷ್ಟು ಅಭಿಮಾನ ಇಟ್ಟಿದ್ದ ಪ್ರಭುಗಳೇ ಹೀಗೆ ಹೇಳಿದರೇಕೆ?

ಪ್ರಭುಗಳಿಗೆ ಉತ್ತರವೇನನ್ನೂ ನೀಡದೆ ಜೋಯಿಸರು ಎದ್ದು ಒಳಗೆ ಹೋಗಿ ಬಿಟ್ಟರು. ಅಂದಿನಿಂದ ಜೋಯಿಸರು ಕವಡೆ ಇಡುವುದನ್ನು, ಜ್ಯೋತಿಷ್ಯ ನುಡಿಯುವುದನ್ನು ನಿಲ್ಲಿಸಿ ಒಂದು ರೀತಿಯ ಮಂಕುಬಡಿದಂತೆ ಆದರು. ಏನು ಮಾತನಾಡಿಸಿದರೂ ತುಟಿ ಮೇಲೆ ಬೆರಳಿಟ್ಟು ಸುಮ್ಮನಿರಲು ಸೂಚಿಸುವುದು, ಬಳಿಕ ೪:೦೦ಘಂಟೆ ಬಾರಿಸಿದ ಕೂಡಲೇ ನಿದ್ರೆಯಲ್ಲಿ ನಡೆಯುವವರಂತೆ ರಸ್ತೆಯತ್ತ ಕಣ್ಣು ನೆಟ್ಟು, ಆ ಮೀನಿನ ಹುಡುಗ ಮತ್ತೆ ಸೈಕಲ್ ನಲ್ಲಿ ಬರುತ್ತಾನೆ ಎಂದು ಹೇಳುವುದೇ ಅವರ ಪರಿಪಾಠ ಎಂದು ಜೋಯಿಸರ ಪತ್ನಿ ಒಮ್ಮೆ ಪ್ರಭುಗಳನ್ನು ಕಂಡಾಗ ಹೇಳಿ ಬಿಕ್ಕಿ ಬಿಕ್ಕಿ ಅತ್ತಿದ್ದರು.

ಇತ್ತ ಈ ಮಧ್ಯೆ ಆಸ್ಪತ್ರೆಯಲ್ಲಿ ನಾಲ್ಕು ದಿನವಿದ್ದು ಊರಿಗೆ ಮರಳಿ ವಿಮೆಯ ಹಣ, ಸಾಲದ ನೋಟಿಸು ಇತ್ಯಾದಿಗಳೊಂದಿಗೆ ಒದ್ದಾಡುತ್ತಾ ರಜಾಕ್, ಪ್ರಭುಗಳಲ್ಲಿ ತನ್ನ ಸುಖ ದುಃಖವನ್ನು ತೋಡಿದ್ದನು. ಜೊತೆಯಲ್ಲೇ, "ಕೈಕಾಲು ಗಟ್ಟಿಯಾಗಿ ಉಳಿದಿದೆಯಲ್ಲ. ಅಷ್ಟೇ ಸಾಕು. ಅದರ ಅಪ್ಪನಂತಹ ಎರಡು ಕಾರು ಕೊಳ್ಳಬಹುದು" ಎಂದು ಹೇಳಿ ಪ್ರಭುಗಳನ್ನು ಮತ್ತಷ್ಟು ಗಲಿಬಿಲಿಗೆ ನೂಕಿದ್ದನು.

ಜೋಯಿಸರ ಸಂಕಟಕ್ಕೆ ಪರಿಹಾರ ಕಂಡುಕೊಳ್ಳಲೇಬೇಕೆಂದು ತೀರ್ಮಾನಿಸಿದ ಪ್ರಭುಗಳು ಅನಂತ ಭಟ್ಟರನ್ನು ಕರೆಸಿ, ಒಂದು ಉಪಾಯ ಹೇಳಲು ಸೂಚಿಸಿದ್ದರು. ಆಗ ಭಟ್ಟರು "ನಾಳೆಯೇ ಜೋಯಿಸರ ಮನೆಗೆ ಹೋಗಿ ಬರೋಣ. ಜೊತೆಯಲ್ಲೇ ನಮ್ಮ ಅದ್ರಾಮ ಬ್ಯಾರಿಯೂ ಬಂದರೆ ಒಳ್ಳೆಯದು ಅಲ್ಲವೇ?" ಎಂದರು. ಆಗ ಪ್ರಭುಗಳು ಕೂಡ, "ರಜಾಕನನ್ನು ಜೋಯಿಸರ ಬಳಿಗೆ ಕಳುಹಿಸಿದವನು ಅವನೇ. ಅವನೇ ಬಂದು ರಜಾಕನ ಕಾರು ಗುದ್ದಿದ್ದರಲ್ಲಿ ಜೋಯಿಸರ ತಪ್ಪೇನು ಇಲ್ಲ, ಅಂದರೆ ಜೋಯಿಸರಿಗೆ ಹೆಚ್ಚು ಸಮಾಧಾನವಾದೀತು. ಅದ್ರಾಮ ಬ್ಯಾರಿಗೆ ಜೋಯಿಸರ ಬಗ್ಗೆ ಒಳ್ಳೆ ಗೌರವವು ಉಂಟು ಏನಂತೀರಾ?" ಎಂದಾಗ ಭಟ್ಟರು "ಆಗಬಹುದು ಪ್ರಭುಗಳೇ" ಎಂದು ಉತ್ತರಿಸಿದರು.

ಇಬ್ಬರೂ ಅದ್ರಾಮ ಬ್ಯಾರಿಯ ಅಂಗಡಿಗೆ ಹೋದರು. ಪ್ರಭುಗಳ ಕಳವಳವನ್ನು ಕಂಡ ಅದ್ರಾಮ ಬ್ಯಾರಿ, "ಪ್ರಭುಗಳೇ, ನೀವು ಮಂಡೆ ಬಿಸಿ ಮಾಡಿಕೊಳ್ಳುವುದರಲ್ಲಿ ಯಾವ ಲಾಭವೂ ಇಲ್ಲ. ಕಾರು ಹುಡಿ ಮಾಡಿಸಿಕೊಂಡವನೇ



ತಲೆಬಿಸಿಯಲ್ಲಿ ಕೈಕಾಲು ಬಿಡಲಿಲ್ಲವಂತೆ. ನೀವು ಯಾಕೆ ಆಕಾಶ ಬಿದ್ದವರ ಹಾಗೆ ತಲೆ ಚಚ್ಚಿಕೊಳ್ಳುವುದು" ಎಂದು ಪ್ರಭುಗಳನ್ನು ಸಂತೈಸಲು ಪ್ರಯತ್ನಿಸಿದರು. ಮಾರನೇ ದಿನವೇ ಮೂವರು ಜೋಯಿಸರ ಮನೆಗೆ ಹೋದರು. ಮೂವರು ಅತಿಥಿಗಳಿಗೂ ಆಸರಿಗೆ ಕೊಟ್ಟು ಜೋಯಿಸರ ಪತ್ನಿ ಒಳಭಾಗದ ದಾರಂದಕ್ಕೆ ಒರಗಿ ನಿಟ್ಟುಸಿರು ಬಿಟ್ಟರು. ಜೋಯಿಸರ ಸುಳಿವು ಕೂಡ ಇರಲಿಲ್ಲ. "ಎಲ್ಲಿ ಅವರು? ಅವರನ್ನು ಹೊರಗೆ ಕರೆಯುತ್ತೀರಾ?" ಎಂದು ಅದ್ರಾಮ ಬ್ಯಾರಿ ಕೇಳಿದಾಗ ಜೋಯಿಸರ ಪತ್ನಿ "ಯಾರೂ ಅವರನ್ನು ಈಗ ಕರೆಯಬೇಕಾದ ಅಗತ್ಯವಿಲ್ಲ. ನಾಲ್ಕು ಘಂಟೆ ಬಡಿದರೆ ಸಾಕು. ಕೀಲಿಕೊಟ್ಟ ಬೊಂಬೆಯಂತೆ ಎದ್ದು ಹೊರ ಬರುತ್ತಾರೆ. ಇನ್ನೇನು ಒಂದೆರಡು ನಿಮಿಷ ಕಳೆದರೆ ನೀವೇ ನೋಡುತ್ತೀರಲ್ಲ." ಎಂದರು.

ನಾಲ್ಕು ಘಂಟೆ ಬಾರಿಸಿದೊಡನೆ ಒಳಬಾಗಿಲ ಪರದೆ ಸರಿಸಿ ಜೋಯಿಸರು ಹೊರ ಬಂದರು. ತಮ್ಮನ್ನು ಕಂಡಾಗ ಎದ್ದು ನಿಂತ ಮೂವರ ಕಡೆಗೂ ಒಂದು ಕ್ಷಣ ಕಣ್ಣು ಹಾಯಿಸಿ, ತುಟಿ ಎರಡು ಮಾಡದೆ ನಿದ್ರೆಯಲ್ಲಿ ನಡೆಯುವವರಂತೆ ನೇರವಾಗಿ ಮುಂಭಾಗದ ಹೊಸಿಲು ದಾಟಿ ಜಗಲಿಗಿಳಿದು ಮೆಟ್ಟಿಲ ಮೇಲೆ ಕುಳಿತು ರಸ್ತೆಯತ್ತ ಕಣ್ಣುನೆಟ್ಟರು. ಮೂವರೂ ಅವರತ್ತ ನಡೆದಾಗ ಪತ್ನಿ, "ಜಗಲಿಗೆ ಹೋಗಿ ಅವರನ್ನು ಮಾತನಾಡಿಸಲು ದೇವರಿಂದಲೂ ಸಾಧ್ಯವಿಲ್ಲ." ಎಂದು ಬಿಕ್ಕಳಿಸುತ್ತ "ಕಳೆದೊಂದು ತಿಂಗಳಿನಿಂದ ಅವರದು ಒಂದೇ ರಾಗ. ಏನು ಮಾತನಾಡಿಸಿದರೂ ತುಟಿ ಮೇಲೆ ಬೆರಳಿಟ್ಟು ಸುಮ್ಮನಿರಲು ಸೂಚಿಸುತ್ತಾರೆ. ಆ ಮೀನಿನ ಹುಡುಗ ಮತ್ತೆ ಸೈಕಲಲ್ಲಿ ಬರುತ್ತಾನಂತೆ! ಏನೂಂತ ಹೇಳುವುದು ಈ ಉನ್ಮಾದಕ್ಕೆ?" ಎಂದು ಹಣೆ ಚಚ್ಚಿಕೊಂಡರು.

"ಯಾ ಅಲ್ಲಾ..." ಅದ್ರಾಮ ಬ್ಯಾರಿ, ಅಚ್ಚರಿಯಿಂದ ಉದ್ಗರಿಸಿದಾಗ ಮೂವರೂ ಗಾಬರಿಯಿಂದ ಅತ್ತ ನೋಡಿದ್ದರು. ಅದ್ರಾಮ ಬ್ಯಾರಿ ಅಷ್ಟೇ ಆವೇಶದಿಂದ "ಜೋಯಿಸರು ಹೇಳುವುದು ನೂರಕ್ಕೆ ನೂರು ಸತ್ಯ. ರಜಾಕ್ ಮತ್ತೆ ಸೈಕಲಲ್ಲಿ ಮೀನು ವ್ಯಾಪಾರ ಆರಂಭಿಸುತ್ತಾನೆ. ಇವತ್ತೇ ಅವನ ವ್ಯಾಪಾರ ಮತ್ತೆ ಶುರುವಾಗಿದೆ". ಅದ್ರಾಮ ಬ್ಯಾರಿ ತನ್ನ ಮಾತನ್ನು ಪೂರ್ತಿಯಾಗಿ ಮುಗಿಸುವ ಮುನ್ನವೇ ಪಾಂ... ಪಾಂ... ಕೇಳಿಸಿತ್ತು. ರಜಾಕ್ ತನ್ನ ಸೈಕಲಿನ ಹಾರ್ನ್ ಬಾರಿಸುತ್ತಾ ಅಂಗಳದೆದುರಿನ ರಸ್ತೆಯಲ್ಲಿ ಹಾದು ಹೋಗುತ್ತಿದ್ದ.

* * *

"ಮೀನು ಮಾರುವವನು ಬಳಿಕ ಹಡಗು ಖರೀದಿಸುತ್ತಾನೆ. ಹಡಗು ಮುಳುಗಿದರೆ ಬಳಿಕ ಮೀನು ಮಾರುತ್ತಾನೆ"

## ಲೇಖಕರ ಪರಿಚಯ



ಬೊಳುವಾರು ಮಹಮ್ಮದ್ ಕುಞ್ಞಿ ೧೯೫೧ ಅಕ್ಟೋಬರ್ ೨೨ ರಂದು ಕರ್ನಾಟಕದ ಪುತ್ತೂರಿನ ಬೊಳುವಾರು ಎಂಬಲ್ಲಿ ಜನಿಸಿದರು. ಅವರ ತಂದೆ ಅಬ್ಬಾಸ್ ಬ್ಯಾರಿ, ತಾಯಿ ಕುಲ್ಸುಂ. ಅವರ ಪ್ರಾರಂಭದ ಶಿಕ್ಷಣವು ಬೊಳುವಾರು, ಪುತ್ತೂರು, ಮಂಗಳೂರುಗಳಲ್ಲಿ ನಡೆಯಿತು. ಮೈಸೂರು, ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಯನ್ನು ಗಳಿಸಿದರು. ಅವರು ಜೀವನ ಚರಿತ್ರೆ, ಪ್ರವಾಸ ಕಥನ, ಅನುವಾದ ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಸಾಧನೆಗೈದವರು. ಅತ್ತ ಇತ್ತಗಳ ಸುತ್ತಮುತ್ತ, ದೇವರುಗಳ ರಾಜ್ಯದಲ್ಲಿ, ಅಂಕ, ಆಕಾಶಕ್ಕೆ ನೀಲಿ ಪರದೆ, ಒಂದು ತುಂಡು ಗೋಡೆ ಅವರ ಪ್ರಮುಖ ಕಥಾಸಂಕಲನಗಳು. ಮಕ್ಕಳಿಗಾಗಿ ತಟ್ಟುಚಪ್ಪಾಳೆ ಪುಟ್ಟ ಮಗು, ಸಂತಮ್ಮಣ್ಣ, ಪಾಪು ಗಾಂಧೀಬಾಪು ಆದ ಕಥೆ ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಸ್ವಾತಂತ್ರ್ಯದ ಓಟ ಎಂಬ ಬೃಹತ್ ಕಾದಂಬರಿಯನ್ನು ಅವರು ರಚಿಸಿದ್ದಾರೆ. ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರವು ಲಭಿಸಿದೆ. ದೆಹಲಿಯ ಕಥಾ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಚಲನಚಿತ್ರಗಳ ಕಥೆಗಾಗಿ ರಾಷ್ಟ್ರಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು ಲಭಿಸಿವೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ತನ್ನ ಔದ್ಯೋಗಿಕ ಜೀವನವನ್ನು ಆರಂಭಿಸಿ ಮಹಾಪ್ರಬಂಧಕರಾಗಿ ದುಡಿದು ನಿವೃತ್ತರಾಗಿದ್ದಾರೆ.

ಇವರ 'ಮೀನು ಮಾರುವವನು' ಕಥೆಯನ್ನು ಬಿ. ಜನಾರ್ದನ ಭಟ್ ಸಂಪಾದಿಸಿದ 'ಬದುಕು ಭಾವದ ಕಥೆಗಳು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ರಜಾಕನು ಜೋಯಿಸರ ಬಳಿಗೆ ಹೋಗಲು ಕಾರಣವೇನು?

೨. ರಜಾಕನಿಗೆ ರೇಡಿಯೋ ಟೈಂ ರಜಾಕ್ ಎಂದು ಹೆಸರು ಬಂದುದು ಹೇಗೆ?

೩. ಕಾರು ಖರೀದಿಸಲಿರುವ ರಜಾಕ್ ನಲ್ಲಿ ಜೋಯಿಸರು ನೀನು ಭವಿಷ್ಯ ತಿಳಿದುಕೊಳ್ಳುವ ಅಗತ್ಯವಿಲ್ಲ ಎಂದು ಹೇಳಿದುದು ಏಕೆ?

೪. ಜೋಯಿಸರು ರಜಾಕ್ ನನ್ನು ಹೇಗೆ ಬೀಳ್ಕೊಟ್ಟರು?

೫. ಶುಕ್ರವಾರದಂದು ರಜಾಕನ ದಿನಚರಿ ಹೇಗಿತ್ತು?

೬. ನಾರಾಯಣ ಪ್ರಭುಗಳು ಕಳವಳಗೊಳ್ಳಲು ಕಾರಣವೇನು?

## ಅನುಕ್ರಮವಾಗಿ ಬರೆಯಿರಿ

ಕಥೆಯ ಪ್ರಧಾನ ಘಟನೆಗಳನ್ನು ಅನುಕ್ರಮವಾಗಿ ಬರೆಯಿರಿ.

## ಸಂದೇಶ ಬರೆಯಿರಿ

'ಮೀನು ಮಾರುವವನು' ಕಥೆಯು ಯುವಪೀಳಿಗೆಗೆ ನೀಡುವ ಸಂದೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ಪಾತ್ರಚಿತ್ರಣ ಮಾಡಿರಿ

'ಮೀನು ಮಾರುವವನು' ಕಥೆಯಲ್ಲಿ ನಿಮಗೆ ಇಷ್ಟವಾದ ಪಾತ್ರದ ಪಾತ್ರಚಿತ್ರಣ ಮಾಡಿರಿ.

## ದಿನಚರಿ ಬರೆಯಿರಿ

ರಜಾಕ್ ಜೋಯಿಸರ ಮನೆಯಿಂದ ಹಿಂದಿರುಗಿ ಬಂದ ಬಳಿಕ ಆ ದಿನದ ದಿನಚರಿಯನ್ನು ಹೇಗೆ ಬರೆದಿರಬಹುದು? ಊಹಿಸಿ ಬರೆಯಿರಿ.

## ಸಮರ್ಥಿಸಿ ಲೇಖನ ಬರೆಯಿರಿ

"ಮೀನು ಮಾರುವವನು ಬಳಿಕ ಹಡಗು ಖರೀದಿಸುತ್ತಾನೆ. ಹಡಗು ಮುಳುಗಿದರೆ ಬಳಿಕ ಮೀನು ಮಾರುತ್ತಾನೆ." ಈ ಮಾತನ್ನು ಕಥೆಯ ಆಧಾರದಲ್ಲಿ ಸಮರ್ಥಿಸಿ ಲೇಖನ ಬರೆಯಿರಿ.

## ಸಂಧಿ ತಿಳಿಯಿರಿ

ಸನ್ಮಾರ್ಗ ಎಂಬ ಪದವನ್ನು ಸತ್ + ಮಾರ್ಗ ಎಂಬುದಾಗಿ ವಿಂಗಡಿಸಲಾಗುತ್ತದೆ. ಎರಡು ಪದಗಳು ಸೇರಿ ಸಂಧಿಯಾಗುವಾಗ ಪೂರ್ವ ಪದದ ಕೊನೆಯಲ್ಲಿ ಬರುವ ಕ,ಚ,ಟ,ತ,ಪ ವ್ಯಂಜನಗಳಿಗೆ ಅನುನಾಸಿಕಗಳು ಪರವಾದಾಗ ಅನುಕ್ರಮವಾಗಿ ಙ, ಞ, ಣ, ನ ,ಮ ಗಳು ಆದೇಶವಾಗಿ ಬರುತ್ತವೆ. ಇದನ್ನು ಅನುನಾಸಿಕ ಸಂಧಿ ಎನ್ನುತ್ತಾರೆ.

ಇದೇ ರೀತಿಯಲ್ಲಿ ಪಾಠದಲ್ಲಿ ಬಂದಿರುವ ಅನುನಾಸಿಕ ಸಂಧಿಪದಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ.

## ಕಿರುಚಿತ್ರ ತಯಾರಿಸಿರಿ

ಈ ಕಥೆಯ ಚಿತ್ರಕಥೆ ಬರೆದು ಶಾಲಾ ಕ್ಯಾಮರಾ ಮತ್ತು ಕಂಪ್ಯೂಟರಿನ ಸಹಾಯದಿಂದ ಕಿರುಚಿತ್ರ ನಿರ್ಮಿಸಿ ಪ್ರದರ್ಶಿಸಿರಿ.

* * *

# ಲಮೇರಿಯಾ

**ನಾ. ಕಸ್ತೂರಿ**

ಒಬ್ಬ ಗುಮಾಸ್ತ; ಮೆಟ್ರಿಕ್ ನಪಾಸ್ ಗುಮಾಸ್ತ, ೧೫ ವರ್ಷದ ಹಿಂದೆ ಮಾಡಿದ ಸಣ್ಣ ತಪ್ಪಿನಿಂದಾಗಿ, ಸಾವಿರಾರು ಜನ ನಿರುದ್ಯೋಗಿಗಳಿಗೆ ಉದ್ಯೋಗ ಸಿಕ್ಕಿತು; ಹತ್ತಾರು ಪದವೀಧರರಿಗೆ ಅಮೇರಿಕಾ ಮುಂತಾದ ಪರದೇಶಗಳಿಗೆ ಪ್ರಯಾಣ ಭತ್ಯೆ, ವ್ಯಾಸಂಗ ವೇತನ, ಪಿ. ಎಚ್. ಡಿ ಇತ್ಯಾದಿ ಬಿರುದು ಬಾವಲಿಗಳು ದೊರೆತುವು. ಆದರೂ ಆ ಗುಮಾಸ್ತ ಬಡತನದಲ್ಲೆ ನರಳಿ, ತನ್ನ ಇಬ್ಬರು ಹೆಣ್ಣು ಮಕ್ಕಳಿಗೂ ಮಾಂಗಲ್ಯಧಾರಣವಾಗಲಿಲ್ಲ ಎಂದು ಕೊರಗುತ್ತಲೇ ಕಣ್ಣು ಮುಚ್ಚಿದ.

೧೫ ವರ್ಷಗಳ ಹಿಂದೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸ್ ಗುಮಾಸ್ತನಾಗಿದ್ದ ತಮ್ಮಯ್ಯ ಯಾವುದೋ ಒಂದು ಫೈಲ್ ನಲ್ಲಿ, "ಈ ಕಟ್ಟೆಯಿಂದ ನಾವು ಇಷ್ಟು ಭಾರೀ ಪ್ರಮಾಣದಲ್ಲಿ ನೀರನ್ನು ಒಂದೆಡೆ ಶೇಖರಿಸಿದರೆ (ಮಲೇರಿಯಾ ಎಂಬುದಕ್ಕೆ ಬದಲಾಗಿ ಇಂಗ್ಲೀಷ್ ಟೈಪ್ ನಲ್ಲಿ) ಲಮೇರಿಯಾ ಹರಡುವುದಿಲ್ಲವೇ" ಎಂಬ ಒಂದು ಪ್ರಶ್ನೆ ಬರೆದ ಕಾಗದದ ಅಂಚಿನಲ್ಲಿ.

ಆ ತಪ್ಪು ಯಾರ ಗಮನಕ್ಕೂ ಬರಲಿಲ್ಲ ಆರೇಳು ವರ್ಷಗಳ ಕಾಲ! ತಮ್ಮಯ್ಯನನ್ನು ಬೇರೊಂದು ಡಿಸ್ಟ್ರಿಕ್ಟ್ ಗೆ ವರ್ಗ ಮಾಡಿದರು. ಅವನ ಹಿಂದಿನ ಆಫೀಸಿಗೆ, ನವ ವಿದ್ಯಾತರುಣ ಭಾರಿ ಪದವೀಧರ, ಒಬ್ಬ ಬೃಹಸ್ಪತಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಬಂದ.

ಆತನ ಕಣ್ಣಿಗೆ ಬಿತ್ತು. "ಲಮೇರಿಯಾ ಹರಡುವುದಿಲ್ಲವೇ?" ಎಂಬ ಭಯೋತ್ಪಾದಕ ಪ್ರಶ್ನೆ... ಕೂಡಲೇ ಅವನು, ಆ ವಿಷಯವನ್ನು ಕುರಿತು ೮ ಪುಟದ ಒಂದು ವರದಿ ತಯಾರಿಸಿದ. ಲಮೇರಿಯಾ ಬಹಳ ಅಪಾಯಕರವೆಂದೂ ಅದರಿಂದ ಲಕ್ಷಾಂತರ ರೂಪಾಯಿಯಷ್ಟು ಕಷ್ಟ ನಷ್ಟ ಒದಗಬಹುದೆಂದೂ, ಆರೇಳು ವರ್ಷಕ್ಕೊಮ್ಮೆ ಅದು ಹರಡುವ ಸಂಭವವುಂಟೆಂದೂ, ಅದರ ಪರಿಹಾರಕ್ಕಾಗಿ ತಾನು ಏನು ಮಾಡಬೇಕೆಂಬುದನ್ನು ಚೀಫ್ ಇಂಜಿನಿಯರ್ ರವರು ತಮಗೆ ಕೂಡಲೇ ಸಲಹೆ ಕೊಡಬೇಕೆಂದೂ ಬರೆದು, ಮೇಲಕ್ಕೆ ರವಾನಿಸಿದ ಆ ವರದಿಯನ್ನು ಓದಿ ಮೇಲೆ ಸಾಗಿಸಿದ ಪ್ರತಿ ಒಬ್ಬ 'ಭಾರೀ ಸಂಬಳದ'ವನಿಗೂ ಗಾಬರಿ! "ಏನೋ ಎಂತೋ! ನಮಗೆ ತಿಳಿಯದು. ಲಮೇರಿಯಾ ಅಂತ ಇದುವರೆಗೂ ಕೇಳಿಲ್ಲ. ಅದರ ವಿಷಯ ತಿಳಿಯದು ಎಂದರೆ ಅಪಮಾನ. ನಾವೇಕೆ ನಮ್ಮ ಅಜ್ಞಾನವನ್ನು ಬಹಿರಂಗ ಪಡಿಸಿಕೊಳ್ಳಬೇಕು" ಎನ್ನುತ್ತ, ಅವರೆಲ್ಲರೂ ಅದೇ ವರದಿಯ ಅಂಚಿನಲ್ಲಿ, "ಇದಕ್ಕೆ ತೀವ್ರ ಗಮನ ಅಗತ್ಯ. ಹಣ ಎಷ್ಟು ಒದಗಿಸಲಾಗುತ್ತದೋ ಅದನ್ನನುಸರಿಸಿ ನಾವು ಪರಿಹಾರಕ್ರಮಗಳನ್ನು ಸೂಚಿಸುತ್ತೇವೆ" ಎಂದು ಟಿಪ್ಪಣಿ ಬರೆದು, ಚೀಫ್ ಇಂಜಿನಿಯರ್ ರವರ ಖಾಸಾ ಮೇಜಿಗೆ ವರದಿಯನ್ನು ನೂಕಿದರು.

ಅವರು ಅದನ್ನು ಓದಿದರು. "ಲಮೇರಿಯಾ?" ಲಮೇರಿಯಾ ಹರಡುವ ಸಂಭವ ಅರ್ಥವಾಗಲಿಲ್ಲ.

ಆದ್ದರಿಂದ, ಇದೇ ಶುಭ ಲಗ್ನ, ಅಂತ ಅವರು, “ಲಮೇರಿಯಾ ನಿವಾರಣೆಗೆ ಪಾಶ್ಚಾತ್ಯ ದೇಶಗಳಲ್ಲಿ ಏನೇನು ಕಾರ್ಯಕ್ರಮ ಮಾಡುತ್ತಿದ್ದಾರೆ ಎಂದು ತಿಳಿದು ಬರಲು ನಾನು ತಕ್ಷಣ ಪ್ರವಾಸ ಕೈಗೊಳ್ಳಲೇಬೇಕು” ಎಂದು ಮೊರೆ ಇಟ್ಟರು.

೧೬೦೦೦ ರೂಪಾಯಿ ಖರ್ಚಿನಲ್ಲಿ ಭೂಪ್ರದಕ್ಷಿಣೆ ಮಾಡಿ ಬಂದರು. ಬಂದವರು, ಸರಕಾರಕ್ಕೆ ಒಂದು ವರದಿ ಒಪ್ಪಿಸಿ, ಲಮೇರಿಯಾ ಭಯ ಇನ್ನೂ ನಮ್ಮ ದೇಶದಲ್ಲಿ ತೀವ್ರಸ್ಥಿತಿಯಲ್ಲೇ ಇದೆ... ಅದು ತಲೆದೋರಿದ ಕೂಡಲೇ ಅದರ ಸ್ವರೂಪವನ್ನು ಪತ್ತೆಹಚ್ಚಿ, ತಕ್ಕ ಏರ್ಪಾಟುಗಳನ್ನು ಮಾಡುವುದಾಗಿ ಹಲವರು ವಾಗ್ದಾನ ಮಾಡಿರುವುದಾಗಿ ತಿಳಿಸಿದರು. ಲಮೇರಿಯಾ ಎಂಬುದು ನಮ್ಮ ದೇಶದಲ್ಲಿ ಮಾತ್ರ ತಲೆದೋರುವ ಒಂದು ರೀತಿಯ ವಿಶೇಷ ಭಯವೆಂದು ಅವರು ವಿವರಿಸಿದರು.

ಅದಕ್ಕಾಗಿ ನಮ್ಮ ಇಲಾಖೆಯ ೩ ಜನರನ್ನು ಆರಿಸಿ ಡಿಲ್ಲಿಗೆ ಕಳುಹಿಸಿದರು. ಅವರು ಆಸೇತು ಹಿಮಾಚಲ ಟಿ. ಎ ಗಳಿಸಿ, ಲಮೇರಿಯಾ ಎಂದರೇನು? ಎಂದು ೧೮೪೩ ಜನರನ್ನು ವಿಚಾರಿಸಿ, ಬಂದ ಉತ್ತರಗಳನ್ನು ೮ ಸಂಪುಟಗಳಾಗಿ ಪ್ರಿಂಟ್ ಮಾಡಿ, ೩೦ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿದರು.‘ಲಮೇರಿಯಾ’ ಎಂಬುದನ್ನು ಒಂದು ಮುಳ್ಳುಗಿಡ! ಅದು, ದನಕರುಗಳಿಗೆ ಆಗಾಗ ಬರುವ ಒಂದು ಭಯಂಕರ ರೋಗ; ಅದು ಸೂರ್ಯಮಂಡಲದಲ್ಲಿ ತೋರಿ ವಿಪರೀತ ಶಾಖಕ್ಕೂ ಅನಾವೃಷ್ಟಿಗೂ ಕಾರಣವಾಗುವ ಒಂದು ಬಗೆಯ ವಿದ್ಯುತ್ ಪ್ರವಾಹ; ಅದು ಕುರಿಗಳ ಕಣ್ಣನ್ನು ತಿನ್ನುವ ಒಂದು ಬಗೆಯ ನುಸಿ! ಅದು ತೆಂಗಿನ ಗರಿಗೆ ತಗಲುವ ಒಂದು ಹುಳ! ಜೌಗು ಪ್ರದೇಶದಲ್ಲಿ ಅತಿಯಾಗಿ ಅಭಿವೃದ್ಧಿಗೊಳ್ಳುವ ಒಂದು ಕ್ರಿಮಿಗೆ ಲಮೇರಿಯಾ ಎಂಬ ಹೆಸರಿದೆ; ನೆಗಡಿ ಹೆಚ್ಚಿದಾಗ ಕಂಡುಬರುವ ತಲೆನೋವಿಗೆ ಲಮೇರಿಯಾ ಎಂಬ ಸೂಕ್ಷ್ಮಾಣುಗಳೇ ಕಾರಣ - ಎಂದೆಲ್ಲ ಹೇಳಿದರು. ಆದ್ದರಿಂದ, ಲಮೇರಿಯಾ ಎಂಬುದು ಏನು? ಎಂದು ಕಂಡುಹಿಡಿಯಲು, ಸಸ್ಯ ಶಾಸ್ತ್ರ, ಖಗೋಳಶಾಸ್ತ್ರ, ಭೂಗರ್ಭಶಾಸ್ತ್ರ, ಭೌತಶಾಸ್ತ್ರ, ಪ್ರಾಣಿಶಾಸ್ತ್ರ, ಜೀವಶಾಸ್ತ್ರ, ಈ ಶಾಸ್ತ್ರಗಳಲ್ಲಿ ಪ್ರವೀಣರಾದ ಬುದ್ಧಿವಂತ ಹುಡುಗರನ್ನು, ಹುಡುಗಿಯರನ್ನು, ಪಾಶ್ಚಾತ್ಯ ದೇಶಗಳಿಗೆ ರವಾನಿಸಬೇಕೆಂದು ಆತ ಶಿಫಾರಸು ಮಾಡಿ, ಅನೇಕ ಅಳಿಯಂದಿರನ್ನೂ ತಮ್ಮಂದಿರನ್ನೂ ಸೋದರ ಸೊಸೆಯರನ್ನೂ ಊರಾಚೆಗೆ ಕಳುಹಿಸಲು ಸಹಾಯ ಮಾಡಿದರು. ಅವರೆಲ್ಲರೂ ಆಯಾ ದೇಶಗಳಿಗೆ ಹೋಗಿ, ಲಮೇರಿಯಾ ಅಂದರೇನು? ಎಂದು ಕೇಳಿದಾಗ, ಅಲ್ಲಿದ್ದ ಪಂಡಿತರುಗಳೆಲ್ಲ ದಿಗ್ಭ್ರಾಂತರಾಗಿ, ತಮ್ಮ ಮಂಕುತನವನ್ನೊಪ್ಪಿಕೊಳ್ಳಲು ಧೈರ್ಯವಿಲ್ಲದೆ, ತಮ್ಮ ಶಿಷ್ಯರನ್ನು ಭಾರತಕ್ಕೆ ಕಳುಹಿಸಿಕೊಟ್ಟರು. ಅಂತು, ಎರಡೇ ಎರಡು ವರ್ಷಗಳಲ್ಲಿ ‘ಲಮೇರಿಯಾ’ ಎಂಬುದನ್ನು ಕುರಿತು, ನೂರಾರು ಗ್ರಂಥಗಳಾದುವು. ಅಖಿಲ ಭಾರತ ಲಮೇರಿಯಾ ಸಮ್ಮೇಳನವೊಂದು ನಡೆಯಿತು. ಅಲ್ಲಿಯ ವಾದ ಪ್ರತಿವಾದಗಳಿಗೆ ಹತ್ತಾರು ‘ವಾಕ್ ಔಟ್’ಗಳು ಜರುಗಿದುವು. ಮೊನ್ನೆ, ೫೨ ರಾಷ್ಟ್ರಗಳ ಪ್ರತಿನಿಧಿಗಳು ಪನಾಮಾದ ಹತ್ತಿರ ಒಂದು ಮಹಾ ಸಮ್ಮೇಳನ ನಡೆಸಿ, ಲಮೇರಿಯಾ ನಿವಾರಣಾ ಯೋಜನೆಯೊಂದನ್ನು ಸಿದ್ಧಪಡಿಸಿ, ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಕಳುಹಿಸುವ ಸಲುವಾಗಿ ಒಂದು ಸಮಿತಿಯನ್ನು ನಿಯಮಿಸಿತು. ಅಣು ಬಾಂಬು ಸ್ಫೋಟನಗಳಿಂದ ಲಮೇರಿಯಾ ಭಯ ಜಗತ್ತಿನಲ್ಲಿ ಇನ್ನೂ ಹೆಚ್ಚುವುದೆಂದು ವಿ. ಕೆ. ಕೃಷ್ಣ ಮೆನೋನ್ ರವರಿಗೆ

ದಿನವೂ ನೂರಾರು ಪತ್ರಗಳು ಬರುತ್ತಿದೆಯಂತೆ. ಆದರೆ, ಕೇಂದ್ರ ಲಮೇರಿಯಾ ಸಂಶೋಧನಾಲಯದವರು ಮಾತ್ರ ಇದನ್ನೊಪ್ಪುತ್ತಿಲ್ಲ. "ಲಮೇರಿಯಾ ಎಂದರೆ ಏನು?" ಎಂಬುದನ್ನು ಪತ್ತೆ ಹಚ್ಚುವ ಪ್ರಯತ್ನದಲ್ಲಿ ಈ ಸಂಶೋಧನಾಲಯದ ೧೧೮ ವಿದ್ಯಾರ್ಥಿಗಳು ಪಿ. ಎಚ್. ಡಿಗಳನ್ನು ಗಳಿಸಿದ್ದಾರೆ; ಸರಿ! ಆದರೂ, ಸಮಸ್ಯೆ ಮಾತ್ರ ಸಮಸ್ಯೆಯಾಗಿಯೇ ಉಳಿದಿದೆ. ನಮ್ಮ ಉದ್ಯಮದಲ್ಲಿ ನಾವು ಹೊಸ ಹುರುಪಿನಿಂದಿದ್ದೇವೆ. ಏಕೆಂದರೆ, ನಮಗೆಲ್ಲ ಮೊನ್ನೆಯಿಂದ ೧೦೦, ೧೫೦ ರೂಪಾಯಿಗಳು ಬಡ್ತಿ ದೊರೆತಿದೆ ಆದರೆ, ಲಮೇರಿಯ ಎಂದರೆ ಏನು ಎಂದು ಖಚಿತವಾಗಿ ತಿಳಿಯುವ ತನಕ, ಅಣುಬಾಂಬು ಸ್ಫೋಟನೆಯಿಂದ ಲಮೇರಿಯಾ ಭಯ ಹೆಚ್ಚುತ್ತದೆ ಎಂದು ನಾವು ಹೇಳಲಾರೆವು" ಎಂದು ಆ ಸಂಶೋಧನಾಲಯದ ಡೈರೆಕ್ಟರ್ ರವರು ಹೇಳಿಕೆ ಇತ್ತಿದ್ದಾರೆ.

ಲಮೇರಿಯಾ ಎಂಬುದೊಂದಿಲ್ಲ, ಮಲೇರಿಯಾ ಎಂದು ಟೈಪು ಮಾಡಲು ಹೋಗಿ ನಮ್ಮ ತಮ್ಮ ಮಾಡಿದ ತಪ್ಪು ಅದು ಎಂದು ಸದ್ಯ ನೀವು ಯಾರಿಗೂ ಹೇಳಬೇಡಿ....

ಪಾಪ! ಆ ಶಾಸ್ತ್ರಜ್ಞರು, ಪಂಡಿತರು, ಅವರ ಶಿಷ್ಯರು, ಆ ಸಂಶೋಧನಾಲಯದವರು, ಅದರ ಡೈರೆಕ್ಟರು, ಅಲ್ಲಿಯ ಪಿ.ಎಚ್.ಡಿ. ಗಳು, ಎಲ್ಲರೂ, ಹೇಗೋ, ಬದುಕಿಕೊಳ್ಳಲಿ....

ಕಂಡವರ ತಲೆಮೇಲೆ ನಾವೇಕೆ ಕಲ್ಲು ಬೀಳಿಸಬೇಕು?

## ಲೇಖಕರ ಪರಿಚಯ



ನಾ. ಕಸ್ತೂರಿ ಎಂದು ಖ್ಯಾತರಾದ ನಾರಾಯಣ ಕಸ್ತೂರಿ ರಂಗನಾಥ ಶರ್ಮ ೨೫-೧೨-೧೮೯೭ ರಲ್ಲಿ ಕೇರಳದ ತೃಪ್ಪೂಣಿತ್ತುರ ಗ್ರಾಮದಲ್ಲಿ ಜನಿಸಿದರು. ಅವರ ತಂದೆ ವಕೀಲರೊಬ್ಬರ ಕಾರಕೂನರಾಗಿದ್ದರು. ಕಸ್ತೂರಿ ೬ ವರ್ಷದವರಾಗಿದ್ದಾಗ ಅವರ ತಂದೆ ಮರಣ ಹೊಂದಿದರು. ತಾಯಿ ತನ್ನ ಆಭರಣಗಳನ್ನು ಮಾರಿ ಮಗನಿಗೆ ಶಿಕ್ಷಣ ಕೊಡಿಸಿದರು. ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ೫ ನೇ ಸ್ಥಾನ ಗಳಿಸಿದರು.

ಅವರು ಎರ್ನಾಕುಲಂ ಮಹಾರಾಜ ಕಾಲೇಜಿನಿಂದ ಇಂಟರ್ ಮೀಡಿಯೆಟ್ ಪದವಿ ಮತ್ತು ತಿರುವನಂತಪುರ ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಪಡೆದರು. ಅವರು ತಿರುವನಂತಪುರದಲ್ಲಿ ಅಧ್ಯಾಪನ ವೃತ್ತಿಯನ್ನು ಆರಂಭಿಸಿದರು. ಮೈಸೂರಿನ ಡಿ.ಬಿ.ಸಿ. ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ, ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ನಿರ್ವಹಿಸಿದರು. ಮೈಸೂರು ಆಕಾಶವಾಣಿಯಲ್ಲಿ ಅಸಿಸ್ಟೆಂಟ್ ಡೈರೆಕ್ಟರಾಗಿ ಕಾರ್ಯನಿರ್ವಹಿಸಿದರು. ಅವರು ಹಲವಾರು ಹಾಸ್ಯ ಲೇಖನ, ನಾಟಕ, ಕತೆ, ಕಾದಂಬರಿಗಳನ್ನು ರಚಿಸಿದ್ದಾರೆ. ಗಗ್ಗಯ್ಯನ ಗಡಿಬಿಡಿ, ಕಾಡಾನೆ, ರಾಮಕೃಷ್ಣಯ್ಯನ ದರ್ಬಾರು, ಬ್ಯಾಂಕಿನ ದಿವಾಳಿ ಮುಂತಾದುವು ಅವರ ನಾಟಕಗಳು ಗಾಳಿಗೋಪುರ, ರಂಗ ನಾಯಕಿ, ಅಲ್ಲೋಲ ಕಲ್ಲೋಲ, ಮುಂತಾದ ಹಾಸ್ಯ ಸಂಕಲನಗಳನ್ನು ರಚಿಸಿದ್ದಾರೆ. ಚೆಂಗೂಲಿಚೆಲುವ, ಡೊಂಕು ಬಾಲ, ಚಕ್ರದೃಷ್ಟಿ, ನೊಂದ ಜೀವಿ ಅವರ ಅನುವಾದಿತ ಕೃತಿಗಳು. ಅವರು ೧೯೮೭ ಆಗಸ್ಟ್ ೧೪ ರಂದು ನಿಧನ ಹೊಂದಿದರು.

ಈ ಪಾಠಭಾಗವನ್ನು 'ನಾ. ಕಸ್ತೂರಿಯವರ ಸಮಗ್ರ ಹಾಸ್ಯ ಸಾಹಿತ್ಯ' ದಿಂದ ಆಯ್ದುಕೊಳ್ಳಲಾಗಿದೆ.

## ಉತ್ತರಿಸಿರಿ

ಕೆಳಗೆ ಕೊಡಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಗುಮಾಸ್ತ ಮಾಡಿದ ತಪ್ಪು ಯಾವುದು?

೨. ಗುಮಾಸ್ತ ಮಾಡಿದ ಸಣ್ಣ ತಪ್ಪಿನ ಪರಿಣಾಮವೇನು?

೩. ಎಕ್ಸಿಕ್ಯೂಟಿವ್ ಇಂಜಿನಿಯರ್ ರವಾನಿಸಿದ ವರದಿಯಲ್ಲಿ ಏನೆಂದು ಬರೆಯಲಾಯಿತು?

೪. ವಿವಿಧ ಅಧಿಕಾರಿಗಳು ಸರ್ವೆ ನಡೆಸಿ ಲಮೇರಿಯಾವನ್ನು ಹೇಗೆ ಚಿತ್ರಿಸಿದರು?

೫. ಸಂಶೋಧನಾಲಯದ ಡೈರೆಕ್ಟರ್ ನೀಡಿದ ಹೇಳಿಕೆ ಏನು?

೬. ಗುಮಾಸ್ತನಾದ ತಮ್ಮನು ಮಾಡಿದ ತಪ್ಪು ಅಣ್ಣನಿಗೆ ತಿಳಿದರೂ ಅದನ್ನು ಬಹಿರಂಗಪಡಿಸದಿರಲು ಕಾರಣವೇನು?

## ಪ್ರಬಂಧ ತಯಾರಿಸಿರಿ

ಉದ್ಯೋಗದಲ್ಲಿ ಬದ್ಧತೆ ಮತ್ತು ಶ್ರದ್ಧೆ ಇಲ್ಲದಿದ್ದರೆ ಹಲವಾರು ಅನಾಹುತಗಳುಂಟಾಗುತ್ತವೆ ಎಂಬುದನ್ನು ತಿಳಿದಿರುವ ನೀವು 'ಉದ್ಯೋಗದಲ್ಲಿ ಬದ್ಧತೆ' ಎಂಬ ವಿಷಯದ ಕುರಿತು ಪ್ರಬಂಧವನ್ನು ರಚಿಸಿರಿ.

## ಊಹಿಸಿ ಬರೆಯಿರಿ

ಗುಮಾಸ್ತನು ಮಾಡಿದ ತಪ್ಪನ್ನು ಮೇಲಾಧಿಕಾರಿ ಗಮನಿಸಿ ತಿದ್ದುತ್ತಿದ್ದರೆ ಏನಾಗುತ್ತಿತ್ತು? ಊಹಿಸಿ ಬರೆಯಿರಿ.

## ಜಾಹೀರಾತು ರಚಿಸಿರಿ

ಕಾಸರಗೋಡಿನ ಹೆಸರಾಂತ 'ಕ್ಷೇಮ' ಆಸ್ಪತ್ರೆಯಲ್ಲಿ ಹೊಸತಾಗಿ ಆರಂಭಿಸುವ ಮೆಡಿಕಲ್ ವೈರೋಲಜಿ ಲ್ಯಾಬ್ ನಲ್ಲಿ ಲ್ಯಾಬ್ ಅಸಿಸ್ಟಂಟ್ ಹುದ್ದೆ ಖಾಲಿ ಇದೆ. ಅದಕ್ಕಾಗಿ ಅರ್ಹ ಅಭ್ಯರ್ಥಿಯ ಆಯ್ಕೆ ಮಾಡುವುದಕ್ಕಾಗಿ ಒಂದು ಜಾಹೀರಾತು ತಯಾರಿಸಿರಿ.

## ಹಸ್ತಪತ್ರಿಕೆ ತಯಾರಿಸಿರಿ

ನಿಮ್ಮ ಅನುಭವಕ್ಕೆ ಬಂದ ಅಥವಾ ಯಾರಾದರೂ ಹೇಳಿದಂತಹ ಹಾಸ್ಯದ ವಿಚಾರಗಳನ್ನು ನಿಮ್ಮ ಮಾತುಗಳಲ್ಲಿ ಪ್ರತಿಯೊಬ್ಬರೂ ಬರೆಯಿರಿ. ಕ್ರೋಡೀಕರಿಸಿ ಹಸ್ತಪತ್ರಿಕೆ ತಯಾರಿಸಿರಿ.

* * *

# ಪದಕೋಶ

ಅಂಚು - ಬದಿ
ಅಂಜಿಕೆ - ಅಳುಕು, ಹೆದರಿಕೆ
ಅಂಬರ - ಬಟ್ಟೆ, ಆಕಾಶ
ಅಂಬಿಕೆ - ತಾಯಿ
ಅಗ್ನಿ ಕಣ - ಬೆಂಕಿಯ ಕಿಡಿ
ಅಘ - ಪಾಪ
ಅಘಮರ್ಷಣ ಮಂತ್ರ - ಪಾಪನಿವಾರಕ ಮಂತ್ರ
ಅಚ್ಚ - ನಿರ್ಮಲ
ಅಡರ್ವುದು - ಏರುವುದು
ಅತ್ತರು - ಸುಗಂಧ ದ್ರವ್ಯ
ಅನಾವಿಲ - ಸ್ವಚ್ಛ
ಅನಿಮಿಷ - ರೆಪ್ಪೆಯಿಲ್ಲದ, ದೇವತ
ಅನಿವಾರಿತ - ತಡೆಯಿಲ್ಲದ
ಅನುಜ - ಒಡಹುಟ್ಟಿದವ, ತಮ್ಮ
ಅನ್ನಸತ್ರ - ಅನ್ನ ಚತ್ರ, ಅನ್ನ ಛತ್ರ
ಅನ್ಯ - ಬೇರೆ
ಅಪಾನೀಯ - ಕುಡಿಯಲು ಯೋಗ್ಯವಲ್ಲದ
ಅಪ್ಪೈಸು - ಒಪ್ಪಿಸು
ಅಬದ್ಧ - ಅಸಮರ್ಪಕ
ಅಬ್ಜಭವ - ತಾವರೆಯಲ್ಲಿ ಜನಿಸಿದವ, ಬ್ರಹ್ಮ
ಅಬ್ಬೆ - ತಾಯಿ, ಅಮ್ಮ
ಅಭ್ಯುದಯ - ಏಳಿಗೆ , ಅಭಿವೃದ್ಧಿ
ಅಮೃತಾರ್ಚಿ - ಅಮೃತ ಕಿರಣಗಳುಳ್ಳವ, ಚಂದ್ರ
ಅರವಿಂದ - ತಾವರೆ, ಕಮಲ
ಅರ್ಘ್ಯ - ದೇವತೆಗಳಿಗೂ ಪೂಜ್ಯರಿಗೂ ಕೈತೊಳೆಯಲು ಕೊಡುವ ನೀರು
ಅಳವಳಿ - ಶಕ್ತಿಗುಂದು
ಅಳವು - ಶಕ್ತಿ, ಪರಾಕ್ರಮ
ಅಱಿವೆನ್ - ನಾಶವಾಗುವೆನು, ಮರಣಹೊಂದುವೆನು

| | | |
|---|---|---|
| ಅಱ್ಕಱಿಂದ | - | ಅಕ್ಕರೆಯಿಂದ, ಪ್ರೀತಿಯಿಂದ |
| ಆದಿತ್ಯತೇಜನ್ | - | ಸೂರ್ಯನಂತೆ ತೇಜಸ್ಸುಳ್ಳವನು |
| ಆಧೇಯನ್ | - | ಆಶ್ರಯವಾದವನು, ಆಧಾರವಾದವನು |
| ಆರಡಿ | - | ಭ್ರಮರ, ದುಂಬಿ |
| ಆಲವಟ್ಟಿ | - | ಬಟ್ಟೆ ಅಥವಾ ತಾಳೆಗರಿಯ ಬೀಸಣಿಗೆ |
| ಆವಿಲ | - | ಕೊಳಕಾದ, ಕಲಕಿದ |
| ಆವರ್ಜಿಸು | - | ಪಡೆಯು, ಒಲಿಸಿಕೊಳ್ಳು, ಸೆಳೆದುಕೊಳ್ಳು |
| ಆಶ್ರಿತಾಭಿಮಾನ | - | ಆಶ್ರಯ ಕೋರಿ ಬಂದವರ ವಿಷಯದಲ್ಲಿ ಅಭಿಮಾನ |
| ಆಸರು | - | ಬಾಯಾರಿಕೆ |
| ಆಸು | - | ಅಷ್ಟು |
| ಆಸೇತು ಹಿಮಾಚಲ | - | ರಾಮೇಶ್ವರದಿಂದ ಹಿಮಾಲಯದವರೆಗೆ |
| ಇಚ್ಚೆ | - | ಅಪೇಕ್ಷೆ, ಬಯಕೆ |
| ಇನವಂಶ | - | ಸೂರ್ಯವಂಶ |
| ಇಸಕೊಂಡು | - | ಪಡಕೊಂಡು |
| ಇಳೆ | - | ಭೂಮಿ |
| ಈಡಾಡು | - | ತೊರೆಯು, ಕಿತ್ತು ಎಸೆ |
| ಉದಕ | - | ನೀರು |
| ಉದ್ದಿಮೆ | - | ಉದ್ಯಮ, ಉದ್ಯೋಗ |
| ಉನ್ಮಾದ | - | ಹುಚ್ಚು |
| ಉರುವಲು | - | ಸೌದೆ |
| ಉರೆ | - | ವಿಶೇಷವಾಗಿ, ಅತಿಶಯವಾಗಿ |
| ಉಱದೆ | - | ಲೆಕ್ಕಿಸದೆ |
| ಎಡೆಮಡಗದೆ | - | ಮರೆಮಾಚದೆ, ತನ್ನಲ್ಲಿ ಏನನ್ನೂ ಇಟ್ಟುಕೊಳ್ಳದೆ. |
| ಎತ್ತೇನೋ | - | ಎದ್ದಿತೇನೋ |
| ಎಱಕ | - | ಪ್ರೀತಿ, ಅನುರಾಗ |
| ಎಳಸು | - | ಬಯಸು, |
| ಏರ್ದೊಡಂ | - | ಯುದ್ಧ ಮಾಡಿದರೂ, ಇದುರಿಸಿದರೂ |
| ಒಡಂಬಡು | - | ಒಪ್ಪು, ತೃಪ್ತಿಪಡು |
| ಒಡರಿಸು | - | ಪ್ರಯತ್ನ ಪಡು |
| ಒಸಿ | - | ಸ್ವಲ್ಪ |
| ಒಳ್ಪಿಂಗೆ | - | ಒಳಿತಿಗೆ, ಸದ್ಗುಣಕ್ಕೆ |
| ಕಂಥೆ | - | ತುಂಡುಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡ |

| | | |
|---|---|---|
| ಕಂದಮೂಲ | - | ಗಡ್ಡೆಗೆಣಸು |
| ಕಟ್ಟಲೆ | - | ನಿಯಮ, ಕಟ್ಟುಪಾಡು |
| ಕಬರಿ | - | ಕೂದಲು |
| ಕರ | - | ಕೈ |
| ಕರಣಿಕ | - | ಗುಮಾಸ್ತ, ಲೆಕ್ಕಪತ್ರಾಧಿಕಾರಿ |
| ಕಲುಷಿತ | - | ಮಲಿನ |
| ಕಲ್ಪಾಂತರಸ್ಥಾಯಿ | - | ಬಹುಕಾಲದ ವರೆಗೆ ಸ್ಥಿರವಾಗಿರುವ |
| ಕಲ್ಯಾಣ | - | ಮದುವೆ |
| ಕಳಸ | - | ಕಲಶ, ಪೂಜೆಯಲ್ಲಿ ನೀರು ತುಂಬಿಡುವ ಬಿಂದಿಗೆ; ದೇವಸ್ಥಾನದ ಗರ್ಭಗುಡಿಯ ಮೇಲ್ಛಾವಣಿಯ ಮೇಲೆ ಇರುವ ಧಾತುವಿನ ಗೋಪುರ |
| ಕಾಕಾರವ | - | ಕಾಗೆಯ ಧ್ವನಿ |
| ಕಾಯಕ | - | ಕೆಲಸ, ಶಿವಾರ್ಪಣೆಯಿಂದ ಮಾಡುವ ಕೆಲಸ |
| ಕಾರುಬಾರು | - | ವ್ಯವಹಾರ |
| ಕಿರುವಳ್ಳ | - | ಸಣ್ಣ ಹಳ್ಳ |
| ಕಿಸುರ್ | - | ಕಲಹ, ಅಸಹನೆ |
| ಕುರುಡು | - | ಅಂಧತ್ವ, ಕಣ್ಣು ಕಾಣದಿರುವಿಕೆ |
| ಕುರುಳು | - | ಕೂದಲು |
| ಕೃಷ್ಣಾಜಿನ | - | ಕೃಷ್ಣಮೃಗದ ಚರ್ಮ |
| ಕೆಯ್ಯಡೆ | - | ನ್ಯಾಸ, ರಕ್ಷಣೆ ಮಾಡಿ ಇಟ್ಟುಕೊಳ್ಳುಲು ಕೊಟ್ಟ ವಸ್ತು |
| ಕೇಳಿ | - | ಆಟ |
| ಕೈಸಾಲೆ | - | ಚಾವಡಿ, ಹೊರಜಗಲಿ |
| ಕೊರಕಲು | - | ಆಳವಾದ ಕಮರಿ, ನದೀಕಂದರ |
| ಕೋದು | - | ಹೆಣೆದು |
| ಕ್ಲೇಶ | - | ತೊಂದರೆ |
| ಕ್ಷಾಮ | - | ಅಭಾವ, ಬರಗಾಲ |
| ಗಂಗಾಂಗನೆ | - | ಗಂಗೆ ಎಂಬ ಸ್ತ್ರೀ, ಗಂಗಾನದಿ |
| ಗಂಗಾವಾರಿ | - | ಗಂಗಾ ನದಿಯ ನೀರು |
| ಗಣಮೇಳಾಪ | - | ಶಿವಶರಣರ ಸಹವಾಸ |
| ಗತ್ಯಂತರ | - | ಬೇರೆ ದಾರಿ, ಅನ್ಯಮಾರ್ಗ, ನಿರ್ವಾಹ |
| ಗರಿಕೆ | - | ಕರಿಕೆ ಹುಲ್ಲು |

| | | |
|---|---|---|
| ಗಾದಿ | - | ಸಿಂಹಾಸನ, ಗದ್ದುಗೆ |
| ಗುಲ್ಲು | - | ಗಲಾಟೆ |
| ಗೆಣೆಯ | - | ಗೆಳೆಯ , ಸ್ನೇಹಿತ |
| ಘರ್ಮ | - | ಬಿಸಿಲು, ಸೆಖೆ |
| ಚಲ | - | ಹಠ, ಸ್ಥಿರಸಂಕಲ್ಪ, ದೃಢತೆ |
| ಚವರ | - | ಚಾಮರ |
| ಚವರಿ | - | ಜೋಳದ ಒಂದು ಪ್ರಕಾರ |
| ಚಾಗ | - | ತ್ಯಾಗ, ದಾನ |
| ಚಾವಡಿ | - | ಪಡಸಾಲೆ |
| ಚಾವಣಿ | - | ಮಾಡು |
| ಚುರುಕು | - | ಚಾಲಾಕು, ಚಾಕಚಕ್ಯತೆ |
| ಚೆಮ್ಮಾಯಿ | - | ಚೆನ್ನಾಗಿ |
| ಚೋದ್ಯ | - | ಪ್ರಶ್ನೆ |
| ಚೌಳು | - | ಉಪ್ಪಿನ ರುಚಿಯುಳ್ಳದ್ದು |
| ಜಂಗಮ | - | ಚಲಿಸುತ್ತಿರುವ |
| ಜಮಖಾನ | - | ನೆಲದ ಮೇಲೆ ಹಾಸುವ ಗಟ್ಟಿ ನೂಲಿನ ಚಾಪೆ |
| ಜರ | - | ಜರತಾರಿ |
| ಜ್ಞಾತಿಗಳು | - | ಅಣ್ಣ ತಮ್ಮಂದಿರ ಮಕ್ಕಳು,ಮೊಮ್ಮಕ್ಕಳು, ದಾಯಾದಿಗಳು |
| ಝುರಿ | - | ಬೆಟ್ಟದಿಂದ ಹರಿದು ಬರುವ ಪ್ರವಾಹ |
| ತಂಡುಲ ಮಾತ್ರ | - | ಅಕ್ಕಿಯ ಕಾಳಿನಷ್ಟು ಮಾತ್ರ |
| ತಕ್ಕ | - | ಪ್ರಾಂತ್ಯದ ಮುಖ್ಯಸ್ಥ |
| ತನೂಜ | - | ಮಗ, ಪುತ್ರ |
| ತರಂಗ | - | ಅಲೆ, ತೆರೆ |
| ತರಣಿ | - | ಸೂರ್ಯ |
| ತರಳೆ | - | ಹುಡುಗಿ |
| ತಳೆದು | - | ಸಿಂಪಡಿಸಿ |
| ತಾಂಬಾಳ | - | ಲೋಹದಿಂದ ಮಾಡಿದ ತಟ್ಟೆ |
| ತಾವು | - | ಎಡೆ, ಸ್ಥಳ |
| ತಿಂಗಳ | - | ಚಂದ್ರ |
| ತಿರುಪೆ | - | ಭಿಕ್ಷೆ , ಯಾಚನೆ |
| ತೀವಿದ | - | ತುಂಬಿರುವ , ಭರ್ತಿಯಾಗಿರುವ |

| | | |
|---|---|---|
| ತೆಕ್ಕನೆ | - | ಹೆಚ್ಚಾಗು, ಅಧಿಕವಾಗಿ |
| ತೊಯ್ಯು | - | ಒದ್ದೆಯಾಗು |
| ತೊತ್ತುವೆಸನಂ | - | ಊಳಿಗ, ಸೇವೆ |
| ತೋಪು | - | ಮರಗಳ ಗುಂಪು |
| ದಾರ್ಷ್ಟ್ಯ | - | ಉದ್ಧಟತನ |
| ದಿಂಡೀರ ಪಿಂಡ | - | ನೊರೆಗಳ ಸಮೂಹ |
| ದಿನಪ | - | ಸೂರ್ಯ |
| ದಿನಾಧಿಪ | - | ದಿನಕರ, ಸೂರ್ಯ |
| ದಿನದ ಒಡೆಯ | - | ಪ್ರಕಾಶ |
| ದುರ್ದೆಶೆ | - | ಕೆಟ್ಟ ಸ್ಥಿತಿ |
| ದೈನಂದಿನ | - | ದಿನ ನಿತ್ಯದ |
| ಧೌತ | - | ತೊಳೆದ,ಸ್ವಚ್ಛಗೊಳಿಸಿದ |
| ಧ್ವಂಸ | - | ನಾಶ |
| ನಂದನ | - | ಮಗ, ಪುತ್ರ |
| ನನ್ನಿ | - | ಸತ್ಯ |
| ನುಡಿಗಡಣ | - | ಮಾತುಗಳ ಸಮೂಹ |
| ನೆಗಳ್ | - | ರಚಿಸು, ನಿರ್ಮಾಣ ಮಾಡು |
| ನೇಸ್ತ | - | ಸ್ನೇಹಿತ, ಗೆಳೆಯ |
| ನೊಸಲು | - | ಹಣೆ, ಲಲಾಟ |
| ಪಡಿ | - | ದಾನವಾಗಿ ಕೊಡುವ ಆಹಾರ ಸಾಮಗ್ರಿ |
| ಪಡು | - | ಪಶ್ಚಿಮ |
| ಪರಸಿ | - | ಹರಸಿ, ಆಶೀರ್ವಾದ ಮಾಡಿ |
| ಪಾಚಿ | - | ಹಾವಸೆ |
| ಪಾದ | - | ಅಡಿ, ಚರಣ |
| ಪಾೞಿ | - | ಕ್ರಮ, ರೀತಿ |
| ಪುತ್ಥಳಿ | - | ಬೊಂಬೆ, ವಿಗ್ರಹ |
| ಪುರಾತನರು | - | ಶಿವಶರಣರು |
| ಪುರಿಗಣೆ | - | ಅತಿಶಯವಾದ ಶಕ್ತಿಯಿಂದ ಕೂಡಿದ ಬಾಣ |
| ಪುರುಳಿ ಉಳಿ | - | ಗಿಳಿಯ ಮಾತು |
| ಪುಷ್ಪ | - | ಹೂವು, ಕುಸುಮ |
| ಪೂಣ್ದು | - | ಪ್ರತಿಜ್ಞೆ ಮಾಡಿ |

| | | |
|---|---|---|
| ಪೂಸು | - | ಲೇಪಿಸು, ಸವರು |
| ಪೆಡಸರ | - | ಸೊಕ್ಕು |
| ಪೆರ್ಜಸ | - | ಹಿರಿದಾದ ಕೀರ್ತಿ |
| ಪೇಲವ | - | ನೀರಸವಾದ,ಸತ್ವವಿಲ್ಲದ |
| ಪೊಡಮಟ್ಟು | - | ನಮಸ್ಕರಿಸಿ |
| ಪೊಡೆವಡು | - | ನಮಸ್ಕರಿಸು, ವಂದಿಸು |
| ಪೌತ್ರ | - | ಮಗನ ಮಗ ,ಮೊಮ್ಮಗ |
| ಪ್ರತ್ಯವಾಯ | - | ಪಾಪ, ದೋಷ |
| ಪ್ರಭುಪದ | - | ರಾಜತ್ವ |
| ಪ್ರಮಾಣಿ | - | ಯಥಾರ್ಥ, ಸತ್ಯ |
| ಫರ್ನ್ | - | ಜರೀಗಿಡ |
| ಬಾತೆ | - | ಬಾಳುವೆ, ಜೀವನ |
| ಬಿಂಬ | - | ಸೂರ್ಯ ಅಥವಾ ಚಂದ್ರನ ಸುತ್ತಲೂ ಇರುವ ಪ್ರಭಾವಲಯ |
| ಬೆಸಗೊಂಬೋರು | - | ವಿಚಾರಿಸುವವರು, ಕೇಳುವವರು |
| ಬೆಸಸು | - | ಆಜ್ಞಾಪಿಸು, ಅಪ್ಪಣೆಕೊಡು |
| ಭಂಗಿ | - | ರೀತಿ |
| ಭತ್ಯ | - | ಉದ್ಯೋಗಿಗಳಿಗೆ ಕೊಡುವ ವಿಶೇಷ ಸಂಭಾವನೆ |
| ಭ್ರಮರ | - | ದುಂಬಿ |
| ಮಂಥನ | - | ಕಡೆಯು |
| ಮಣಿಯು | - | ನಮಸ್ಕರಿಸು |
| ಮಧ್ಯಾಹ್ನಿಕ | - | ಮಧ್ಯಾಹ್ನ ಕಾಲದ ಸಂಧ್ಯಾವಂದನೆ |
| ಮನ:ಕ್ಲೇಶ | - | ಮನಸ್ಸಿನ ನೋವು |
| ಮನ್ವಂತರ | - | ಪರಿವರ್ತನೆಯ ಕಾಲ, ಹೊಸಯುಗ |
| ಮರಾಲ | - | ಹಂಸ |
| ಮರ್ತ್ಯಲೋಕ | - | ಭೂಲೋಕ |
| ಮಲ್ನಾಡಕೆ | - | ಮಲೆನಾಡಿಗೆ |
| ಮಾನನಿಧಿ | - | ಮಾನವೇ ನಿಧಿಯಾಗಿ ಉಳ್ಳವ |
| ಮಾರ್ಗ ನಿರೋಧ | - | ದಾರಿಗೆ ಅಡ್ಡಿ |
| ಮಾರ್ತಂಡ | - | ಸೂರ್ಯ |
| ಮಿಗ | - | ಮೃಗ |
| ಮಿಥ್ಯ | - | ಸುಳ್ಳು |
| ಮುಂಗಾಣದೆ | - | ದಾರಿ ತೋರದೆ,ಮುಂದೇನು ಮಾಡಬೇಕು ತಿಳಿಯದೆ |

| | | |
|---|---|---|
| ಮುಖರೇದ | - | ಮಾತುಗುಳಿ |
| ಮುಗುಳು | - | ಮೊಗ್ಗು |
| ಮುಸುಕು | - | ಹೊದಿಕೆ, ಹಬ್ಬು, ದಟ್ಟವಾಗಿರು |
| ಮೂಡು | - | ಪೂರ್ವ |
| ಮೂಲೋತ್ಪಾಟನ | - | ಬೇರು ಸಹಿತ ಕಿತ್ತೆ ಸೆಯುವುದು |
| ಮೇಘ | - | ಮುಗಿಲು |
| ಮೇದಿನೀಶ | - | ಭೂಮಿಯ ಒಡೆಯ, ರಾಜ |
| ಮೈ | - | ದೇಹ |
| ಮೊರಡಿ | - | ಗುಡ್ಡ, ಬೆಟ್ಟ |
| ಮೋರೆ | - | ಮುಖ |
| ರಣ | - | ಯುದ್ಧ, ಕಾಳಗ |
| ರಾಧೇಯ | - | ರಾಧೆಯ ಮಗ, ಕರ್ಣ |
| ಲಲ್ಲೈಸು | - | ಮುದ್ದಿಸು, ಪ್ರೀತಿಸು |
| ಲೆಂಕ | - | ಸೇವಕ |
| ವಚನ | - | ಮಾತು |
| ವಾರಿಧಿ | - | ಸಮುದ್ರ |
| ವೃಷ್ಟಿ | - | ಮಳೆ |
| ವ್ಯತಿರಿಕ್ತ | - | ಭಿನ್ನವಾದ |
| ಶಲಾಕೆ | - | ಸಲಿಕೆ, ಕಡ್ಡಿ |
| ಶಾವೆ | - | ಸೇವೆ |
| ಸಂಗತ | - | ಒಟ್ಟಾದ, ಯೋಗ್ಯವಾದ |
| ಸಂಗಳಿಸು | - | ಒಟ್ಟುಸೇರು |
| ಸಂಜಿ | - | ಸಂಜೆ |
| ಸಂದಣಿ | - | ಗುಂಪು |
| ಸಖ | - | ಗೆಳೆಯ, ಮಿತ್ರ |
| ಸಜ್ಜೆ | - | ಉಪ್ಪರಿಗೆಯ ಮೊಗಸಾಲೆ |
| ಸತ್ಕೃತ | - | ಉಪಕಾರ |
| ಸತ್ರಾಧಿಕಾರ | - | ಸತ್ರದ ಅಧಿಕಾರ |
| ಸಯ್ಪು | - | ಪುಣ್ಯ, ಅದೃಷ್ಟ, ಸೌಭಾಗ್ಯ |
| ಸರ | - | ಸ್ವರ |
| ಸರಬರಾಜು | - | ಪೂರೈಕೆ |
| ಸಾಷ್ಟಾಂಗ ಮೆರಗು | - | ದೇಹದ ಎಂಟು ಅಂಗಗಳನ್ನು ನೆಲಕ್ಕೆ ತಾಗಿಸಿ ನಮಸ್ಕಾರ ಮಾಡುವ |

| | | |
|---|---|---|
| ಸುಗೀತ | - | ಹಾಡುಗಳು |
| ಸುರದ್ಯುತ್ತ ಸುರದಾವ | - | ಸುರಿದರೂ ಸುರಿದೀತು |
| ಸೂರ್ಯಜ | - | ಸೂರ್ಯ ಪುತ್ರ, ಕರ್ಣ |
| ಸೆರಿಗ್ಗೆ | - | ಸೆರಗಿಗೆ |
| ಸೇಸೆ | - | ಮಂತ್ರಾಕ್ಷತೆ |
| ಸೊಲ್ಲು | - | ಮಾತು |
| ಸೋಹು | - | ಅಟ್ಟು, ಓಡಿಸು |
| ಸ್ವತಂತ್ರಿಸು | - | ಸ್ವಾತಂತ್ರ್ಯವನ್ನು ತೆಗೆದುಕೊಳ್ಳು |
| ಸ್ಥಾವರ | - | ಸ್ಥಿರವಾದ |
| ಸ್ಥಾಣು | - | ಕಂಬ |
| ಸ್ಥೂಲ | - | ನಿಖರವಲ್ಲದ, ಸರಿಸುಮಾರಾದ |
| ಹಂಬು | - | ಬಳ್ಳಿ |
| ಹಚ್ಚಡ | - | ದುಪ್ಪಟಿ , ಬಟ್ಟೆ, ವಸ್ತ್ರ, ಹೊದಿಕೆ |
| ಹಡದಿ | - | ಅಗಸನು ಒಗೆದು ಕೊಟ್ಟ ಬಟ್ಟೆ |
| ಹಣಿಗೆ | - | ಬಾಚಣಿಗೆ |
| ಹರದಾರಿ | - | ಕಾಲು ಯೋಜನ, ಸುಮಾರು ಮೂರು ಮೈಲಿ |
| ಹರದಾವ | - | ಹರಿದು ಹೋದವು |
| ಹಳು | - | ಕಾಡು |
| ಹಾಸು | - | ಹರಡು |
| ಹಾಹಾಕಾರ | - | ಪರದಾಟ, ಗೋಳಾಟ |
| ಹೀನ ವೃತ್ತಿ | - | ವ್ಯಕ್ತಿಯ ಘನತೆಗೆ ತಕ್ಕುದಲ್ಲದ  ಕೆಲಸ |
| ಹೆರಳು | - | ಕೂದಲನ್ನು ಒಟ್ಟಾಗಿ ಸೇರಿಸಿ ಹೆಣೆದುದು, ಜಡೆ |
| ಹೈದ | - | ಹುಡುಗ, ಬಾಲಕ |
| ಹೊಗರಿಸು | - | ಸೂಸು, ಹೊಳೆ |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in